

ನಮ್ಮ ಮಾನಸ

ಸಂಪುಟ : 2 ಜೂನ್ 2008 ಸಂಚಿಕೆ : 2

ನಮ್ಮ ಮಾನಸ

ಜೂನ್ 2008

ಸಂಪುಟ : 2 ಸಂಚಿಕೆ : 2

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road,
Raghavanagara
New Timberyard Layout
Bangalore - 560 026.
© : 26757159

•

ಚಂದಾ ವಿವರ

ಬಿಡಿಪ್ರತಿ	8–00 ರೂ.
ವಾರ್ಷಿಕ ಚಂದಾ (ವಿಶೇಷ ಸಂಚಿಕೆಯೊಂದಿಗೆ)	100–00 ರೂ.
ಸಂಸ್ಥೆಗಳಿಗೆ	150–00 ರೂ.

ಪರಿವಿಡಿ



ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ, ವಿಜಯನಗರ
ಮೈಸೂರು – 570 017

ಸಂಪಾದಕೀಯ

ಪ್ರಭುತ್ವಗಳು ಮಹಿಳೆಯರ ಆರೋಗ್ಯವನ್ನೇ ಪಣಕ್ಕೊಡ್ಡಿವೆ!

ಲೈಂಗಿಕತೆಯ ಬಗ್ಗೆ ಭಾರತೀಯರಲ್ಲಿ ಇರುವ ಮಡಿವಂತಿಕೆ, ಮುಜುಗರ ಆರೋಗ್ಯದ ಮೇಲೆ, ವಿಶೇಷವಾಗಿ ಮಹಿಳೆಯ ಆರೋಗ್ಯದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎಂಬುದನ್ನು ನಾವು ಈ ದಿನಗಳಲ್ಲಿ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಜೊತೆಗೆ ಖಾಸಗೀಕರಣಕ್ಕೆ ಒಳಗಾಗುತ್ತಿರುವ ಆರೋಗ್ಯ ಸೇವೆಗಳು, ಹೆಂಗಸರನ್ನೇ ಗುರಿಯಾಗಿಟ್ಟುಕೊಂಡಿರುವ ಕುಟುಂಬ ಯೋಜನಾ ಕ್ರಮಗಳು, ಸಂಶೋಧನೆಗಳು, ಶಿಕ್ಷಣ ವ್ಯವಸ್ಥೆ– ಹೆಂಗಸರ ಪುನರ್ ಉತ್ಪಾದನೆಯ ಮೇಲೆ ಋಣಾತ್ಮಕ ಪರಿಣಾಮಗಳನ್ನು ಬೀರುತ್ತಿರುವುದನ್ನು ನಾವು ಗಮನಿಸಬಹುದಾಗಿದೆ.

ಹೆರಿಗೆ ಸಂದರ್ಭದಲ್ಲಿ ಸಾಯುವ ತಾಯಂದಿರ ಸಂಖ್ಯೆಯು ದಕ್ಷಿಣ ಏಷಿಯಾದಲ್ಲಿ, ಮುಖ್ಯವಾಗಿ ಭಾರತದಲ್ಲಿಯೇ ಹೆಚ್ಚಾಗಿದೆ. ೧೦೦,೦೦೦ಕ್ಕೆ ೫೪೦ ಜನ ಗರ್ಭಿಣಿಯರು ಅಥವಾ ೫ ನಿಮಿಷಕ್ಕೊಬ್ಬ ಹೆಂಗಸು ಹೆರಿಗೆಯ ಸಂದರ್ಭದಲ್ಲಿ ಸಾವನ್ನಪ್ಪುತ್ತಾಳೆ. ಅಧ್ಯಯನವೊಂದರ ಪ್ರಕಾರ ೧,೩೬,೦೦೦ ಮಹಿಳೆಯರು ಭಾರತದಲ್ಲಿ ಪ್ರತಿವರ್ಷ ತಾಯ್ತನಕ್ಕೆ ಸಂಬಂಧಿಸಿದ ವಿಚಾರಗಳಲ್ಲಿಯೇ ಸಾವನ್ನಪ್ಪುತ್ತಾರೆ. ನಾಗಾಲ್ಯಾಂಡಿನ ದೂರದ ಹಳ್ಳಿಗಳ ಆಸ್ಪತ್ರೆಗಳಲ್ಲಿ ಕಳೆದ ಹನ್ನೆರಡು ವರ್ಷಗಳಿಂದಲೂ ಆಕ್ಸಿಜನ್ ಸಿಲಿಂಡರ್ ಇಲ್ಲ. ಬಹಳ ಅಪಾಯಕಾರಿಯಾದ ಓಪನ್ ಏರ್ ಅನಸ್ಥೇಷಿಯವನ್ನೇ ಇಲ್ಲಿ ಮಾಡಲಾಗುತ್ತಿದೆ. ಹೆಂಗಸರ ನಾಡಿ ಮಿಡಿತ ಕಡಿಮೆಯಾದರೆ, ಅಥವಾ ಹೃದಯಾಘಾತವಾದರೆ ಅಂಥವುಗಳನ್ನು ಚಿಕಿತ್ಸೆ ಮಾಡುವ ಯಾವ ವಿಧಾನವೂ ಅಲ್ಲಿ ಇಲ್ಲ. ಅದೃಷ್ಟವಿದ್ದರೆ ತಾಯಿ, ಮಗು ಬದುಕಬೇಕಷ್ಟೇ. ಇಂತಹ ಸಂದರ್ಭದಲ್ಲಿ ಸಾಯುವುದೇ ಅನಿವಾರ್ಯ ಆಯ್ಕೆ ಆಗಿರುತ್ತದೆ. ಇಷ್ಟು ಕೆಳಮಟ್ಟದ ಆರೋಗ್ಯಸೇವೆ ಹೊಂದಿರುವ ಭಾರತದಲ್ಲಿ ಹೀಗೆ ಒಂದು ವಾರಕ್ಕೆ ಸಾಯುವ ಮಹಿಳೆಯರ ಸಂಖ್ಯೆಯು ಯುರೋಪ್‌ನಲ್ಲಿ ಒಂದು ವರ್ಷಕ್ಕೆ ಸಾಯುವ ಮಹಿಳೆಯರ ಸಂಖ್ಯೆಗೆ ಸಮನಾಗಿರುತ್ತದೆ. ಹೆರಿಗೆಯ ನಂತರ ಸೋಂಕಿನಿಂದಾಗಿ ಹಾಗೂ ಅಪೌಷ್ಠಿಕತೆಯಿಂದಾಗಿ ಕೂಡಾ ಮಹಿಳೆಯರು ಅನೀಮಿಯಾಕ್ಕೆ ತುತ್ತಾಗುತ್ತಾರೆ. ಹೀಗಿದ್ಯಾಗ್ಯೂ ಆರೋಗ್ಯ ಅಧಿಕಾರಿಯೊಬ್ಬರು 'ನಮ್ಮ ಹೆಂಗಸರು ಗಟ್ಟಿಮುಟ್ಟಾಗಿದ್ದಾರೆ. ಅವರಲ್ಲಿ ಬಲವಿದೆ' ಎಂದು ನುಡಿಯುತ್ತಾರೆ! ಸರಿಯಾದ ಆರೋಗ್ಯ ಸೇವೆಗಳನ್ನು ನೀಡದಿರುವುದಕ್ಕೆ, ಮಹಿಳೆಯರ ಆರೋಗ್ಯದ ಹಕ್ಕುಗಳನ್ನು ನಿರಾಕರಿಸುವುದಕ್ಕೆ ಮೇಲಿನ ಮಾತು ಒಂದು ಉದಾಹರಣೆ ಮಾತ್ರ. ಹೊಸ ಔಷಧಗಳು ಬೇಕು ಎನ್ನುವುದಕ್ಕಿಂತ ಮುಖ್ಯವಾಗಿ ಶುಚಿತ್ವ ಹಾಗೂ ಪೌಷ್ಠಿಕ ಆಹಾರಗಳು ಮಹಿಳೆಯರ ಸಾವನ್ನು ತಡೆಯಬಹುದಾಗಿದೆ. ಸುರಕ್ಷಿತ ತಾಯ್ತನ ಎನ್ನುವುದು ಒಂದು ಸಾಮಾಜಿಕ ಸಮಸ್ಯೆಯಾಗಿ ಪರಿಗಣಿತವಾಗಿ ಹೆಚ್ಚು ಗಮನ ಸೆಳೆಯುವ ಅಂಶವಾಗಬೇಕಿದೆ.

ಕುಟುಂಬ ಯೋಜನಾ ಕ್ರಮಗಳು ಹೆಂಗಸರಿಗೆ ಎಷ್ಟು ಸುರಕ್ಷಿತವಾಗಿವೆ ಎಂಬುದೂ ಕೂಡಾ ಮುಖ್ಯವೇ. ಡಿಪೋಪ್ರೊವೇರ, ಐ.ಪಿಲ್, ವಂಕಿ ಮುಂತಾದ ವಿಧಾನಗಳು ಹೆಂಗಸರ ಆರೋಗ್ಯದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತಿವೆ, ಅವರ ಆತಂಕಗಳೇನು ಎಂಬುದರ ಕಡೆ ಯಾವ ಕಂಪನಿಗಳೂ ಯೋಚಿಸುವುದಿಲ್ಲ. ಪಶ್ಚಿಮ ಬಂಗಾಳ ಹಾಗೂ ಇತರ ಹಲವು ಕಡೆಗಳಲ್ಲಿ ನಿಷೇಧಗೊಂಡಿರುವ ಕ್ವಿನೆಕ್ರೈನ್ ಮದ್ದನ್ನು ಇಂದಿಗೂ ಗುಟ್ಟಾಗಿ ಬಳಸಲಾಗುತ್ತಿದೆ. ಗರ್ಭಿಣಿಯಾಗುವುದನ್ನು ತಡೆಯುವುದು, ಗರ್ಭಪಾತ ಮಾಡಿಸಿಕೊಳ್ಳುವುದು ಇಂತಹವುಗಳು ಕೊನೆಗೆ ಹೆಂಗಸರ ತಲೆನೋವುಗಳೇ ಆಗಿರುವುದರಿಂದ ಬೇರೆ ಬೇರೆ ಸ್ತರದ ಹೆಂಗಸರು ತಮಗೆ ಸರಿಕಂಡ, ಅಥವಾ ಸುಲಭವಾಗಿ ಕೈಗೆ ದಕ್ಕುವ ಕುಟುಂಬ ಯೋಜನಾ ವಿಧಾನಗಳಿಗೆ ಮೊರೆಹೋಗುವುದು ಅನಿವಾರ್ಯವಾಗುತ್ತಿದೆ. ಆರೋಗ್ಯ ಸೇವೆಗಳು ಖಾಸಗೀಕರಣಗೊಂಡು ಎಲ್ಲವೂ ತುಟ್ಟಿಯಾಗಿರುವ ಸಂದರ್ಭದಲ್ಲಿ ಮಹಿಳೆಯರ ಆರೋಗ್ಯವನ್ನೇ ಎಲ್ಲಾ ಪ್ರಭುತ್ವಗಳು ಪಣಕ್ಕೊಡ್ಡತೊಡಗಿವೆ. ಹೊರದೇಶಗಳಿಂದ ಬರುವ ಗರ್ಭನಿರೋಧಕಗಳನ್ನು ಬೇಕಾಬಿಟ್ಟಿಯಾಗಿ ಹೆಂಗಸರ ಮೇಲೆ ಹೇರುವಂತಹ ವಾತಾವರಣದಲ್ಲಿ ಹೆಂಗಸರು ಅನಿವಾರ್ಯವಾಗಿ ಬಲಿಪಶುಗಳಾಗುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಲೈಂಗಿಕ ಶಿಕ್ಷಣ ಬೇಕೇ, ಬೇಡವೇ ಎಂಬ ಚರ್ಚೆಯನ್ನು ಬರಿಯ ಲೈಂಗಿಕ ಕ್ರಿಯೆಗೆ ಸಂಬಂಧಿಸಿ ನೋಡುವಂಥದ್ದಲ್ಲ ಎಂಬುದನ್ನು ನಮ್ಮಲ್ಲಿ ಅನೇಕ ಪಕ್ಷಗಳು, ರಾಜಕಾರಣಿಗಳು ಅರಿಯಬೇಕಾಗಿದೆ. ಲೈಂಗಿಕ ಶಿಕ್ಷಣ ಬೇಡ ಎನ್ನುತ್ತ, ಭಾರತೀಯ ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದ್ದೇವೆಂದುಕೊಂಡವರು ಲೈಂಗಿಕತೆಯ ಅಜ್ಞಾನ ಮಹಿಳೆಯರ ಆರೋಗ್ಯದ ಮೇಲೆ ಬೀರುತ್ತಿರುವ ಪರಿಣಾಮಗಳನ್ನು ಗಮನಿಸಲು ನಿರಾಕರಿಸುತ್ತಾರೆ ಎಂದೇ ಅರ್ಥ. ದೇಹದ ಮೇಲಿನ ಹಕ್ಕು, ಕುಟುಂಬ ಯೋಜನೆಯ ವಿಧಾನದ ಆಯ್ಕೆ, ತಾಯ್ತನದ ಆಯ್ಕೆ ಮೊದಲಾದ ಮಹಿಳೆಯರ ಸಬಲೀಕರಣದ ವಿಚಾರಗಳು ಲೈಂಗಿಕ ಶಿಕ್ಷಣದಲ್ಲಿ ಅಡಕವಾಗಿದ್ದರೆ ಗಂಡಂದಿರ ತಪ್ಪಿಗೆ ಜೀವಮಾನವಿಡೀ H.I.V.ಯಿಂದ ಬಳಲುವ, ಸಾಯುವ ಅನೇಕ ಮಹಿಳೆಯರಲ್ಲಿ ಜಾಗೃತಿ ಮೂಡೀತು.

'ಲಿಂಗ ಪರೀಕ್ಷೆ'ಯ ವಿಧಾನವೂ ಕೂಡಾ ಹೆಂಗಸರ ಸಂಖ್ಯೆ ಹಾಗೂ ಆರೋಗ್ಯದ ಮೇಲೆ ವಿಪರೀತ ಪರಿಣಾಮವನ್ನು ಉಂಟುಮಾಡುತ್ತಿದೆ. 'ಲಿಂಗ ಪರೀಕ್ಷೆ ವಿಧಾನ'ವನ್ನು ನಿಷೇಧಗೊಳಿಸಿದ್ದರೂ ಕೂಡಾ, ಗಂಡುಮಕ್ಕಳನ್ನೇ ಪಡೆಯಬೇಕೆಂಬ ಒತ್ತಡದಲ್ಲಿ

ಭಾರತದ ಅನೇಕ ಭಾಗಗಳಲ್ಲಿ ಗರ್ಭಿಣಿಯರು ಗುಟ್ಟಾಗಿ ಈ ಪರೀಕ್ಷೆಗೆ ಒಳಗಾಗುತ್ತಾರೆ. ಗುಟ್ಟಾಗಿ ನಡೆಯುವ ಇಂತಹ ಪರೀಕ್ಷೆಗಳು ಮಹಿಳೆಯರ ಆರೋಗ್ಯವನ್ನು ಪೂರ್ತಿಯಾಗಿ ಮೂಲೆಗುಂಪು ಮಾಡುತ್ತಿವೆ. ೧೯೯೧ರಲ್ಲಿ ೧೦೦೦ ಗಂಡಸರಿಗೆ ೯೪೫ ಮಂದಿ ಮಹಿಳೆಯರಿದ್ದರೆ, ೨೦೦೧ರ ಅಂಕಿ ಅಂಶದ ಪ್ರಕಾರ ೧೦೦೦ ಮಂದಿ ಪುರುಷರಿಗೆ ೯೨೭ ಮಂದಿ ಮಹಿಳೆಯರು ಭಾರತದಲ್ಲಿ ಇದ್ದಾರೆ. ಗಂಡುಮಕ್ಕಳನ್ನೇ ಪಡೆಯುವ ಹುನ್ನಾರಗಳಿಂದ ಈ ರೀತಿಯ ಅಸಮಾನತೆ ಮುಂದುವರಿಯುತ್ತದೆ.

ಇಂತಹ ಒತ್ತಡಗಳನ್ನು ಮೀರಲು ಸಹಾಯ ಮಾಡುವಂತಹ ಸಾಮಾನ್ಯ ಶಿಕ್ಷಣ ಕೂಡಾ ಮಹಿಳೆಯರಲ್ಲಿ ಇಲ್ಲ. ೨೪೫ ಮಿಲಿಯ ಭಾರತೀಯ ಮಹಿಳೆಯರಿಗೆ ಓದಲು ಅಥವಾ ಬರೆಯಲು ಕೂಡಾ ಬರುವುದಿಲ್ಲ. ೧೫ ವರ್ಷದ ಮೇಲಿನ ವಯಸ್ಕರ ಶಿಕ್ಷಣವನ್ನು ಗಣನೆಗೆ ತೆಗೆದುಕೊಂಡರೆ ೨೦೦೦ದಲ್ಲಿ ೪೬.೪% ಮಹಿಳೆಯರು ಶಿಕ್ಷಣ ಹೊಂದಿದ್ದರೆ, ೬೯% ಯುವಕರು ಶಿಕ್ಷಣ ಹೊಂದಿರುವುದು ಕಂಡುಬರುತ್ತದೆ.

ಶಿಕ್ಷಣದ ಕೊರತೆ, ಲೈಂಗಿಕ ಶಿಕ್ಷಣದ ಕೊರತೆ, ಸಾಮಾಜಿಕ, ಆರ್ಥಿಕ ಅಸಮಾನತೆಯಿಂದಾಗಿ ಮಹಿಳೆಯರ ಆರೋಗ್ಯವನ್ನು ಒತ್ತೆ ಇಡಲಾಗಿದೆ. ಹಾಗಾಗಿ ೧೪೦೦ ಕ್ಯಾಲರೀಸ್ ಆಹಾರ ತೆಗೆದುಕೊಳ್ಳುವ ಮಹಿಳೆಗೆ ೨೨೦೦ ಕ್ಯಾಲೊರೀಸ್ ಪೌಷ್ಟಿಕತೆ ಅಗತ್ಯ ಎನ್ನುವ ಸತ್ಯ ತಿಳಿದಿಲ್ಲ. ೩೮% H.I.V ಪಾಸಿಟೀವ್ ಹೆಂಗಸರಲ್ಲಿ ೨೫% ಹೆಂಗಸರು ಮಾತ್ರ ಏಡ್ಸ್ ಡೇ ಕೇರ್ ಕೇಂದ್ರಗಳಲ್ಲಿ ಇರುವುದು ಕಂಡುಬರುತ್ತದೆ. ಭಾರತದ ೯೨% ಹೆಂಗಸರು ಗೈನಲಾಜಿಕಲ್ ತೊಂದರೆಗಳಿಂದ ನರಳುತ್ತಲೇ ಇರುತ್ತಾರೆ.

ಮಹಿಳೆಯರ ಸ್ಥಿತಿ-ಗತಿ ಸುಧಾರಿಸುವ ಪ್ರಯತ್ನಗಳು ಕಂಡುಬಂದರೂ ಸಂವಿಧಾನದ 'ಲಿಂಗತ್ವ ಸಮಾನತೆ'ಯ ಕನಸು ಕನಸಾಗಿಯೇ ಉಳಿದಿದೆ. ಮಹಿಳೆಯರ ಆರೋಗ್ಯವನ್ನು ನಮ್ಮ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಆಯಾಮಗಳಿಂದ ಬಿಡಿಸಿ ಏಕ ಮುಖವಾಗಿ ನೋಡಲು ಸಾಧ್ಯವಾಗುವುದಿಲ್ಲ. ಎಲ್ಲವೂ ಒಂದಕ್ಕೊಂದು ತಳುಕು ಹಾಕಿಕೊಂಡಿವೆ. ಹಾಗಾಗಿ ಮಹಿಳೆಯರ ಆರೋಗ್ಯಕ್ಕೆ ಒಂದು integrated ಆಗಿರುವಂತಹ ಒಳನೋಟದಿಂದಲೇ ಶ್ರಮಿಸುವುದು ಇಂದಿನ ಜರೂರಿಯಾಗಿದೆ.

* * *

ಸಾರಾಯಿ ಮಾರಾಟ ನಿಷೇಧವನ್ನು ಪಕ್ಷದ ಸಾಧನೆಯೆಂದು ಒಂದು ಕಡೆ ರಾಜಕೀಯ ಪಕ್ಷಗಳು ಹೇಳುತ್ತಿದ್ದ ಹಾಗೆ ಚುನಾವಣೆಯ ಸಂದರ್ಭದಲ್ಲಿ ಜನರಿಗೆ ಹಂಚುವುದಕ್ಕೆಂದೆ ಸಂಗ್ರಹವಾದ ಕಳ್ಳಭಟ್ಟಿ ಸಾರಾಯಿಯಿಂದ ನೂರಾರು ಜನರ ಮಾರಣಹೋಮ ನಡೆದಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತವರ ಕುಟುಂಬದ ಹೆಂಗಸರು, ಮಕ್ಕಳು ಆಶ್ರಯವಿಲ್ಲದೆ ಅನಾಥರಾಗಿದ್ದಾರೆ. ಅಬಕಾರಿ ಇಲಾಖೆಯ ಅಧಿಕಾರಿಗಳು, ರಾಜಕಾರಣಿಗಳು ಪೊಲೀಸರ ಬೆಂಬಲವಿಲ್ಲದೇ ಈ ಪ್ರಮಾಣದಲ್ಲಿ ಕಳ್ಳಭಟ್ಟಿ ತಯಾರಿಸಲು ಸಾಧ್ಯವಿಲ್ಲ. ದುರಂತದಲ್ಲಿ ಮಡಿದವರಲ್ಲಿ ಬಡವರು ದೀನದಲಿತರು ಅನಕ್ಷರಸ್ಥರೇ ಹೆಚ್ಚು. ಈ ದುರಂತಕ್ಕೆ ಸರ್ಕಾರವೇ ನೇರವಾಗಿ ಕಾರಣವಾಗುತ್ತದೆ ಮತ್ತು ಇದರ ನೈತಿಕ ಹೊಣೆಯನ್ನು ಹೊರಬೇಕಾಗುತ್ತದೆ. ಕಳ್ಳಭಟ್ಟಿ ಸಾರಾಯಿ ಕುಡಿದು ಮಡಿದ ಕುಟುಂಬದ ಮಹಿಳೆಯರಿಗೆ ಸರ್ಕಾರ ಸೂಕ್ತ ಪರಿಹಾರವನ್ನು ನೀಡುವುದರ ಜೊತೆಗೆ ಮಕ್ಕಳ ವಿದ್ಯಾಭ್ಯಾಸಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡುವ ಕಾಳಜಿಯನ್ನೂ ತೋರಿಸಬೇಕಾಗಿದೆ.

* * *

ಕರ್ನಾಟಕದಲ್ಲಿ ರಾಷ್ಟ್ರಪತಿ ಆಡಳಿತ ಮುಗಿಯಿತು. ಮತ್ತೆ ಪ್ರಜಾಪ್ರತಿನಿಧಿಗಳ ಸರ್ಕಾರಕ್ಕೆ ಜನಾದೇಶ ದೊರೆತಿದೆ. ಹೊಸದಾಗಿ ಅಧಿಕಾರಕ್ಕೆ ಬಂದವರಲ್ಲಿ ಮಹಿಳೆಯರೂ ಇದ್ದಾರೆ. ಇವರಿಗೆಲ್ಲ ಉತ್ತಮ ಅವಕಾಶಗಳು ಸಿಗಲಿ; ಅವರಿಂದ ಮಹಿಳಾಪರ ಕಾರ್ಯಗಳು ಮುಂದುವರೆಯಲಿ ಎಂಬುದು ಆಶಯ.

* * *

ಮೂಡುಬಿದಿರೆಯ 'ಶಿವರಾಮಕಾರಂತ ಪ್ರತಿಷ್ಠಾನ'ದಿಂದ ಶ್ರೇಷ್ಠ ಕೃತಿರಚನೆಗಾಗಿ 'ಶಿವರಾಮಕಾರಂತ' ಪ್ರಶಸ್ತಿ ಪಡೆದ ಖ್ಯಾತ ಲೇಖಕಿ ನೇಮಿಚಂದ್ರ ಅವರಿಗೆ ಮಾನಸದ ಅಭಿನಂದನೆಗಳು.

ಕರ್ನಾಟಕ ಲೇಖಕಿಯರ ಸಂಘದ ಈ ಸಾಲಿನ 'ಅನುಪಮಾ ಪ್ರಶಸ್ತಿ'ಗೆ ಭಾಜನರಾದ ಹಿರಿಯ ಕವಯಿತ್ರಿ ಮಾಲತಿ ಪಟ್ಟಣಶೆಟ್ಟಿ ಅವರಿಗೆ ಮತ್ತು ಇನ್ನಿತರ ಪ್ರಶಸ್ತಿ ಪುರಸ್ಕೃತರಿಗೆ 'ನಮ್ಮ ಮಾನಸ'ವು ಅಭಿನಂದಿಸುತ್ತದೆ.

* * *

ಅನುಪಮಾ ಹಾಗೂ ನಿರಂಜನ ದಂಪತಿಗಳ ಕಿರಿಯ ಮಗಳು ಸೀಮಂತಿನಿ ನಿರಂಜನ ಮಹಿಳಾಪರ ಚಿಂತನೆಗಳನ್ನು ತುಂಬ ಗಂಭೀರವಾಗಿ ಅಧ್ಯಯನ ಮಾಡಿದವರು. ಸಹೋದರಿ ತೇಜಸ್ವಿನಿ ಅವರೊಟ್ಟಿಗೆ ಸಂಪಾದಿಸಿದ ಕೃತಿಗಳು ಹಾಗೂ ಅವರ 'ಜಂಡರ್ ಅಂಡ್ ಸ್ಪೇಸ್' ಕೃತಿ ಮಹಿಳಾ ಲೋಕಕ್ಕೆ ಅವರಿತ್ತ ಅನನ್ಯ ಕೊಡುಗೆ. ತೀವ್ರವಾದ ಅರ್ಬುದ ಬಾಧೆಯಿಂದ ನೊಂದ ಸೀಮಂತಿನಿ ಅವರು ಇತ್ತೀಚೆಗೆ ನಿಧನರಾದುದು ವಿಷಾದದ ಸಂಗತಿ. ಅವರಿಗೆ ಮಾನಸ ಬಳಗದ ಶ್ರದ್ಧಾಂಜಲಿಗಳು.

❑

ಸ್ತ್ರೀ ಲೈಂಗಿಕತೆ ಒಂದು ವಿಶ್ಲೇಷಣೆ

● ಎನ್.ಎಸ್. ಶ್ರೀಧರಮೂರ್ತಿ



ಲೈಂಗಿಕತೆ ಎಂದರೆ ಮುಜುಗರ ಪಡುವ ಸಂಗತಿಯಲ್ಲ. ಸ್ತ್ರೀ ಲೈಂಗಿಕತೆ ಎಂಬುದನ್ನು ವಿಶ್ಲೇಷಿಸದೆ ಹೀಗಿರುವುದು ವಿಶೇಷವೇನಲ್ಲ, ಇವತ್ತಿನ ಬದಲಾದ ಸವಾಲುಗಳ ಹಿನ್ನೆಲೆಯಲ್ಲಾದರು ಇದರ ಚರ್ಚೆ ಅಗತ್ಯವಾಗಿದೆ ಎಂಬುದನ್ನು ಗುರುತಿಸುವುದೇ ಈ ಲೇಖನದ ಉದ್ದೇಶ. 'ಕಾಮಸೂತ್ರ' ದಿಂದ ಆರಂಭವಾಗುವ ಭಾರತೀಯ ಚಿಂತನಾಕ್ರಮ ಪುರುಷನ ಕಣ್ಣುಗಳಿಂದಲೇ ನೋಡಲ್ಪಟ್ಟಿದ್ದು, "ರಾಜನು ಯಾವುದಾದರೂ ಸುಂದರ ಸ್ತ್ರೀಯನ್ನು ಅಪೇಕ್ಷಿಸಿದರೆ ಅವಳನ್ನು ಮರುಳು ಮಾಡಿ ಅಂತಃಪುರಕ್ಕೆ ಕರೆದುಕೊಂಡು ಬಂದು ಮದ್ಯಕುಡಿಸಿ ಬುದ್ಧಿಹೀನಳನ್ನಾಗಿಸಿ ಭೋಗಿಸಬೇಕು" ಎಂದು ವಿಶ್ಲೇಷಿಸುವ ಅಲ್ಲಿ ಆಲಿಂಗನವು ಪ್ರೇಮಿಗಳ ಜೊತೆ ನಾಲ್ಕು ಬಗೆ, ಗುರುತಿಲ್ಲದವರ ಜೊತೆ ಮೂರು ಬಗೆ. ಚುಂಬನ ಕೆಳತುಟಿಗೆ, ಮೂರು ವಿಧ, ಎರಡು ತುಟಿಗಳಿಗೆ ನಾಲ್ಕು ವಿಧ. ದಂತಕ್ಷತ ಎಂಟು ವಿಧ, ಚೀತ್ಕಾರ ಏಳು ವಿಧ...... ಇಂತಹ ಭಾವರಹಿತ ಪಟ್ಟಿಗಳಿವೆ. ಲೈಂಗಿಕತೆ ಎಂಬುದನ್ನು ಅನುಭೂತಿ ಎಂದಾಗಲಿ, ಅದನ್ನು ಹೆಣ್ಣು ಅನುಭವಿಸಬೇಕು ಎಂಬ ಭಾವವಾಗಲಿ ಕಾಣುವುದಿಲ್ಲ. ಪಾಶ್ಚಾತ್ಯರ ನಿಲುವು ಕೂಡ ಬಹಳ ಪ್ರಗತಿಪರವಾಗಿಲ್ಲ. ಇಲ್ಲಿ ಹೆಣ್ಣೆಂದರೆ 'ಅಮೂರ್ತ' ಎನ್ನುವ ಪ್ಲೇಟೋ ಸಿಕ್ಕುತ್ತಾನೆ. ನಿಸರ್ಗದ ಕೊರತೆಯಿಂದ ಹೆಣ್ಣು ಹುಟ್ಟಿದ್ದಾಳೆ ಎಂಬ ಅರಿಸ್ಟಾಟಲ್ ಸಿಕ್ಕುತ್ತಾನೆ. ಸಿಗ್ಮಂಡ್ ಫ್ರಾಯ್ಡ್‌ಗೆ ಬಂದರೆ ಹೆಣ್ಣು ಒಂದು ಮನೋವಿಕಾರ. ಮೊದಲು ಈಡಿಪಸ್ ಕಾಂಪ್ಲೆಕ್ಸ್ ಬರೆದು, ನಂತರ ಅದಕ್ಕೆ ಸಂವಾದಿಯಾಗಿ ಅವನು 'ಎಲೆಕ್ಟ್ರಾ ಕಾಂಪ್ಲೆಕ್ಸ್' ಬರೆಯುತ್ತಾನೆ. 'ತಾಯ್ತನ' ನೈಸರ್ಗಿಕ ಸತ್ಯವಾದರೆ, 'ತಂದೆತನ' ಸಾಮಾಜಿಕವಾಗಿ ರೂಪುಗೊಂಡ ವ್ಯವಸ್ಥೆಯಿಂದ ಫಲಿತವಾದದ್ದು ಎಂಬುದನ್ನು ಅವನು ಮರೆತೇಬಿಡುತ್ತಾನೆ. ಇವನಿಂದ ಪ್ರಭಾವಿತವಾದ ಆಡ್ಲರ್‌ನ ಚಿಂತನೆಗಳು ಇನ್ನಷ್ಟು ಅಸಂಬದ್ಧವಾಗಿವೆ. ದ್ವಿಲಿಂಗತ್ವದ ಪ್ರತಿಪಾದಕನಾದ ಕಾರ್ಲ್‌ಯೂಂಗ್ ಸೈದ್ಧಾಂತಿಕವಾಗಿ ಸ್ತ್ರೀಪರನಾಗಿ ಕಾಣಿಸಿದರೂ ಪ್ರತಿಪಾದನೆಯಲ್ಲಿ ಪುರುಷ ಪಕ್ಷಪಾತಿಯಾಗೇ ಕಾಣಿಸುತ್ತಾನೆ.

ಎಪ್ಪತ್ತರ ದಶಕದಿಂದೀಚೆಗೆ ಒಂದು ಪ್ರಬಲ ಸ್ತ್ರೀವಾದಿ ನಿಲುವು ರೂಪುಗೊಳ್ಳುತ್ತಿದೆ. ಪರಂಪರೆಯಲ್ಲಿ ನುಸುಳಿ ಹೋಗಿದ್ದ ಸುಳ್ಳುಗಳನ್ನು ಹೊರ ತೆಗೆಯುವ ಪ್ರಯತ್ನ ಗಂಭೀರವಾಗೇ ನಡೆದಿದೆ. ನ್ಯಾನ್ಸಿಯೋಡ ರೋವ್ ಮತ್ತು ಹೆಲನ್ ಸೀಕ್ಸ್ಯೂ ಈ ಚಿಂತನೆಗಳ ಸ್ವೀಕಾರಾರ್ಹವಾದ ಸಂಗತಿಗಳನ್ನು ಹೊಂದಿಸುವ ಪ್ರಯತ್ನ ಮಾಡಿದರು. 'ತಾಯ್ತನ'ದ ದ್ವಂದ್ವಗಳನ್ನು ಹಿಡಿಯಲು ಪ್ರಯತ್ನಿಸಿದರು. ಆದರೆ ಫ್ರೆಂಚ್ ಸ್ತ್ರೀವಾದಿ ಚಿಂತಕಿ ಲ್ಯೂನ್ ಇರಿಗರೆ ಭಿನ್ನ ನಿಲುವು ತಳೆದಳು. ಹೆಣ್ಣಿನ ಲೈಂಗಿಕತೆಯನ್ನು ಪಿತೃಪ್ರಧಾನತೆಯು ನಿರ್ವಚಿಸಿರುವ ರೀತಿಯಿಂದಾಗಿ, ಸ್ತ್ರೀಯರು ತಮ್ಮ ಸ್ವಂತಿಕೆಯನ್ನು ಕಳೆದುಕೊಳ್ಳುವಂತಾಯಿತು ಎಂದು ವಿಶ್ಲೇಷಿಸಿದಳು. ಲೈಂಗಿಕತೆ ಮತ್ತು ಭಾಷೆ ಕುರಿತು ಹಲವು ಕುತೂಹಲಕರ ಸಂಗತಿಗಳನ್ನು ಇರಿಗರೆ ಪ್ರತಿಪಾದಿಸಿದ್ದಾಳೆ, ಪುರುಷ ಲೈಂಗಿಕತೆ ಒಂದು ಉನ್ಮಾದ, ಆದರೆ ಸ್ತ್ರೀ ಲೈಂಗಿಕತೆಯಲ್ಲಿ ಸೃಷ್ಟಿಯ ಬಹುಮುಖಿ ಸಾಧ್ಯತೆಗಳಿವೆ, ಹೀಗಾಗಿ ದ್ವಿಲಿಂಗತ್ವದ ಕಲ್ಪನೆಯನ್ನೇ ಅವಳು ನಿರಾಕರಿಸುತ್ತಾಳೆ. ಇರಿಗರೆಯವರ ವಾದ ಮುಂದುವರಿಸಿದ ಹೆಲನ್ ಸೀಕ್ಸ್ಯೂ ಶಬ್ದ ಕೇಂದ್ರೀಕೃತ ತತ್ವಗಳನ್ನು ಪ್ರತಿಪಾದಿಸಿದಳು. ಸ್ತ್ರೀಯಾತ್ಮಕ ಲಿಬಿಡೋಗಳ ಮೂಲಕ ಹೆಣ್ಣಿನ ಲೈಂಗಿಕ ಅವಯವಗಳನ್ನು ವಿಶ್ಲೇಷಿಸುವ ಸೀಕ್ಸ್ಯೂ ಗಟ್ಟಿಯಾದ ತಾತ್ವಿಕ ನೆಲೆಯನ್ನು ತಲುಪುತ್ತಾಳೆ. ಈ ಚರ್ಚೆಯನ್ನು ಬೆಳೆಸುವ ಇನ್ನೊಬ್ಬ ಚಿಂತಕಿ ಜೂಲಿಯ ಕ್ರಿಸ್ತೇವ. ಪುರುಷ ನೆಲೆಯ ಪ್ರತಿಪಾದನೆಯಿಂದ ಸ್ತ್ರೀ ಲೈಂಗಿಕತೆ ವ್ಯಕ್ತಿಗತ ಸಾಧ್ಯತೆ ಕಳೆದುಕೊಂಡಿದ್ದನ್ನು ವಿಶ್ಲೇಷಿಸುವ ಇವಳು, ಇದು ಮನುಕುಲದ ನಾಶಕ್ಕೆ ಕಾರಣವಾಗಬಲ್ಲದು ಎಂದು ಎಚ್ಚರಿಸಿದ್ದಾಳೆ. ಜರ್ಮನ್ ಗ್ರಿಯರ್ ನಾವು ಹೆಣ್ಣು-ಗಂಡಿನ ವ್ಯತ್ಯಾಸವನ್ನು ವಿಪರೀತ ಉತ್ಪ್ರೇಕ್ಷಿಸುತ್ತಿದ್ದೇವೆ ಎಂಬ ಹೊಸ ನೆಲೆ ಗುರುತಿಸಿದ್ದಾಳೆ.

ಈಗ ಸ್ತ್ರೀಲೈಂಗಿಕತೆ ಎಂಬ ಪರಿಕಲ್ಪನೆ ತಾತ್ವಿಕವಾಗಿ ಗಟ್ಟಿಯಾಗಿ ಬೆಳೆದಿದೆ. ಇದು ಕೋಮಲತೆ ಸಂಕೇತ ಪಾತ್ರವಲ್ಲವೆಂದು, ಸೃಷ್ಟಿ ಕ್ರಿಯೆ ಅಷ್ಟೇ ಅಲ್ಲವೆಂದು ಸಾಬೀತಾಗಿದೆ. ಇದರ ಹಿಂದಿನ ರಾಜಕೀಯವೂ ಬದಲಾಗಿದೆ. ಆದರೆ ಅದು ವ್ಯಾಪಕವಾಗಿ ಚರ್ಚಿತವಾಗುತ್ತಿಲ್ಲ.

-೨-

ಭಾರತೀಯ ಸಂದರ್ಭದಲ್ಲಿ ಸ್ತ್ರೀಲೈಂಗಿಕತೆ ಎಂಬುದು ಒಂದು ಸ್ವೀಕಾರದ ಗುಣ ಮಾತ್ರವಾಗಿದೆ. ಅಲ್ಲಿ ಅನುಭವ ಎಂಬುದು ಹಿಂಸೆಯಾಗಿ ಮಾತ್ರ ಕಾಣಿಸಿಕೊಂಡಿದೆ. ಈ ಹಿಂಸೆ ಮದುವೆಯಾದ ಮೊದಲ ರಾತ್ರಿಯಿಂದಲೇ ಆರಂಭವಾಗುತ್ತದೆ. ಬೆದರಿದ ಹರಿಣಿಯಂತಾದ ವಧುವಿನ ಮೇಲೆ ಪುರುಷ ತನ್ನ ಆಕ್ರಮಣದ ಮೂಲಕ ಲೈಂಗಿಕ ಬದುಕು ಆರಂಭಿಸುತ್ತಾನೆ. ಎಂ.ಇ.ಖಾನ್ ಅವರ ಸಮೀಕ್ಷೆಯ ಪ್ರಕಾರ **(The Journal of Family welfare 2007)** ಶೇ. ೮೦ರಷ್ಟು ಮಹಿಳೆಯರಿಗೆ ಲೈಂಗಿಕತೆ ಎಂದರೆ ಹಿಂಸೆಯೇ. ದೈಹಿಕ ಆಕ್ರಮಣ. ಭಾವನಾತ್ಮಕ ಒತ್ತಡ ಇಲ್ಲಿ ನಿರಂತರವಾಗಿ ಇದ್ದೇ ಇರುತ್ತದೆ. ಶೇ. ೬೦ರಷ್ಟು ಸಂದರ್ಭಗಳಲ್ಲಿ ಸಂಭೋಗ ಒತ್ತಡದಿಂದಲೂ ಸಾಧ್ಯವಾಗುತ್ತದೆ. ದೈಹಿಕವಾಗಿ ಹಿಂಸಿಸುವುದು ಮಾತ್ರವಲ್ಲದೆ, ಮಾನಸಿಕವಾಗಿ ಹೆಣ್ಣಿಗೆ ತಾನು ಬೆಲೆ ಇಲ್ಲದವಳು ಎಂಬ ಭಾವನೆ ಬರುವಂಥ ಒತ್ತಡ ತರಲಾಗುತ್ತದೆ. ಇದರ ಫಲವಾಗಿ ಲೈಂಗಿಕ ಕ್ರಿಯೆ ನಡೆದ ಮೇಲೆ ತನಗೆ ಸುಖ ಸಿಕ್ಕಿಲ್ಲ ಎಂದು ಪುರುಷರು ತಕರಾರು ತೆಗೆಯುತ್ತಾರೆ. ಶಾರಿಮನ್ ಅವರ ಸಮೀಕ್ಷೆ ಪ್ರಕಾರ ಹೀಗೆ ತಕರಾರು ತೆಗೆಯುವ ಪುರುಷರು ಕೆಟ್ಟ ಭಾಷೆಯಲ್ಲಿ ಹೆಣ್ಣನ್ನು ಮಾತ್ರವಲ್ಲ, ಅವಳ ತಂದೆ-ತಾಯಿಯರನ್ನೂ ಬೈಯುತ್ತಾರೆ. ಇದನ್ನು ಉಲ್ಲೇಖಿಸಿ ಶಾರಿಮನ್ ಹೇಳುತ್ತಾರೆ, ಇಂತಹ ಪುರುಷರಿಗೆ ತಮಗೆ ಏನು ಬೇಕು ಎಂದೇ ಗೊತ್ತಿರುವುದಿಲ್ಲ. ತಮ್ಮ ಕೊರತೆಗಳಿಗೆಲ್ಲ ಹೆಣ್ಣು ಸುಖ ನೀಡದಿರುವುದೇ ಕಾರಣ ಎಂದು ಭಾವಿಸುತ್ತಾರೆ. ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ಭ್ರಮೆಯಿಂದಲೇ ಬೇರೆ ಸಂಬಂಧಗಳನ್ನು ಇಟ್ಟುಕೊಳ್ಳುತ್ತಾರೆ.

ವಿಶ್ವ ಆರೋಗ್ಯ ಸಂಸ್ಥೆ ೨೦೦೫ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ವ್ಯಕ್ತವಾದ ವಿವರಗಳು ಲೈಂಗಿಕತೆಯ ಸ್ವರೂಪದ ಬಗ್ಗೆ ಆತಂಕದ ಚಿತ್ರಣ ನೀಡುತ್ತವೆ. ಪುರುಷರು ಆಕ್ರಮಣಶಾಲಿಗಳಾಗಿರುವುದಷ್ಟೇ ಅಲ್ಲ, ಸ್ತ್ರೀಯರೂ ಅವರಿಗೆ ಸುಖ ನೀಡುವುದೇ ತಮ್ಮ ಜೀವನದ ಪರಮ ಉದ್ದೇಶವೆಂದು ಭಾವಿಸಿದ್ದಾರೆ. ಈ ಕ್ರಿಯೆಯಲ್ಲಿ ತಾನೂ ಸುಖ ಪಡಬಹುದು ಎಂಬ ಕಲ್ಪನೆ ಕೂಡ ಆಕೆಗಿಲ್ಲ. ತನ್ನ ಕೈ-ಕಾಲುಗಳನ್ನು ಕಟ್ಟಿ ಸಂಭೋಗಿಸುತ್ತಿದ್ದವರ ಕುರಿತು, 'ಅವರಿಗೆ ಅದರಿಂದಲೇ ಸುಖ ಸಿಕ್ಕರೆ ತಪ್ಪೇನು' ಎಂದುಕೊಳ್ಳುವವರಿದ್ದಾರೆ. ಸಮೀಕ್ಷೆಯಲ್ಲಿ ಭಾಗವಹಿಸಿದ ಮಾಹಿತಿದಾರಳೊಬ್ಬಳು ಹೀಗೆ ಹೇಳುತ್ತಾಳೆ "ಅವರಿಗೆ ಮುಖ ಮೈಥುನವೇ ಇಷ್ಟ, ನಾನು ಅದನ್ನು ಒಪ್ಪಿಕೊಂಡಿದ್ದೇನೆ, ಆದರೆ ಬಾಯಲ್ಲಿ ವೀರ್ಯ ವಿಸರ್ಜನೆಯಾದ ನಂತರ ವಾಂತಿಮಾಡಿಕೊಳ್ಳುತ್ತೇನೆ, ಅವರಿಗೆ ಅದು ಇಷ್ಟವಾಗುವುದಿಲ್ಲ. ಅದಕ್ಕಾಗಿ ಹೊಡೆಯುತ್ತಾರೆ. ನಾನು ವಾಂತಿಯಾಗದಂತೆ ಪ್ರಯತ್ನಿಸುತ್ತಿದ್ದೇನೆ".

ಭಾರತವೂ ಸೇರಿದಂತೆ ಆರು ಏಷ್ಯದೇಶಗಳಲ್ಲಿ ಸ್ತ್ರೀ ಲೈಂಗಿಕತೆಯ ಸ್ವರೂಪದ ಬಗ್ಗೆ ಅಧ್ಯಯನ ನಡೆಸಿರುವ ಸುನಿತಾ ಕಿಶೋರ್ ಅವರ ಪ್ರಕಾರ, ಈ ಎಲ್ಲಾ ದೇಶಗಳಲ್ಲೂ ಸ್ತ್ರೀಯರು ಲೈಂಗಿಕತೆ ಮತ್ತು ಹಿಂಸೆ ತಮ್ಮ ಕುಟುಂಬದ ಭಾಗ ಎಂದೇ ಭಾವಿಸಿದ್ದಾರೆ. ಇದು ಕೇವಲ ಗ್ರಾಮೀಣ ಪ್ರದೇಶದಲ್ಲಿ ಮಾತ್ರವಲ್ಲ ನಗರದ ವಿದ್ಯಾವಂತ ಮಹಿಳೆಯರಲ್ಲೂ ಕಾಣುವ ಮನೋಭಾವ. ಅವರಲ್ಲಿ ಈ ಕುರಿತು ತಾವು ಮಹತ್ವವನ್ನು ಕಳೆದುಕೊಂಡಿದ್ದೇವೆ ಎಂಬ ಭಾವ ಕಾಣಿಸುವುದಿಲ್ಲ. ಇದಕ್ಕೆ ಕಾರಣ ಈ ದೇಶಗಳಲ್ಲಿ ಅದರಲ್ಲೂ ಮುಖ್ಯವಾಗಿ ಭಾರತದಲ್ಲಿ 'ಸಿಂಡ್ರೆಲಾಮಿಥ್' ಮಹಿಳೆಯರಲ್ಲಿ ಜಾಸ್ತಿ, ಅವರಿಗೆ ಪ್ರೇಮದ ಭಾವೋನ್ಮಾದಗಳು ಮುದ ನೀಡುತ್ತವೆಯೇ ಹೊರತು ಲೈಂಗಿಕ ವಿಚಾರಗಳಲ್ಲ (ಈ ಸಮೀಕ್ಷೆಯಲ್ಲೇ ಬಹಳಷ್ಟು ಮಹಿಳೆಯರು ಅಪ್ಪುಗೆ-ಚುಂಬನದಲ್ಲಿ ಖುಷಿ ಪಡುವುದಾಗಿ ಹೇಳಿದ್ದಾರೆ. ಅವರಿಗೆಲ್ಲ ಸಂಭೋಗ ಯಾಂತ್ರಿಕ ಕ್ರಿಯೆ). ಇದಕ್ಕೆ ಮುಖ್ಯಕಾರಣ ಲೈಂಗಿಕ ವಿಚಾರಗಳು ನಮ್ಮಲ್ಲಿ ಹೆಚ್ಚಾಗಿ ಚರ್ಚಿತವಾಗದೆ ಇರುವುದು. ಹುಸಿ ಕನಸುಗಾರಿಕೆ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. ಈ ಕುರಿತ ಕತೆ-ಕಾದಂಬರಿಗಳು, ಪ್ರೇಮ ಕವನಗಳು ಬರುತ್ತವೆ. ಚಲನಚಿತ್ರದಲ್ಲೂ ಈ ಅಂಶಕ್ಕೇ ಮಹತ್ವ ಹೀಗಾಗಿ ಹೆಣ್ಣಿಗೆ ಲೈಂಗಿಕತೆ ಎಂದರೆ ಪ್ರೇಮಿಯ ನವಿರಾದ ಸ್ಪರ್ಶ ಮಾತ್ರ, ಆದರೆ ಇದೂ ಕೂಡ ಸಾಧ್ಯವಾಗದ ಸಂದರ್ಭಗಳು ಹೇರಳವಾಗಿವೆ. ಈ ಅಂಶದ ಕುರಿತ ಹೆಚ್ಚಿನ ಚರ್ಚೆ ಅಗತ್ಯವಾಗಿರುವುದೇ ಈ ಕಾರಣಕ್ಕಾಗಿ. ಹೆಣ್ಣು ಸಂಕೋಚದ ತೆರೆಯಲ್ಲೇ ಬದುಕುತ್ತಾಳೆ, ಅತ್ಯಂತ ಖಾಸಗಿ ಕ್ಷಣದಲ್ಲಿಯೂ ಅದನ್ನು ದಾಟುವುದಿಲ್ಲ. ಹೀಗಾಗಿ ತನ್ನ ಲೈಂಗಿಕ ಹಕ್ಕುಗಳ ಕುರಿತು ಜಾಗೃತಗಳಾಗುವುದಿಲ್ಲ. ಸಂತಾನ ಹರಣ ಶಸ್ತ್ರಚಿಕಿತ್ಸೆಗಳು ಶೇ. ೮೦ರಷ್ಟು ನಡೆಯುವುದು ಹೆಣ್ಣಿನ ಮೇಲೆ. ಮಾತ್ರವಲ್ಲ ಇಂತಹ ಪ್ರಯೋಗಗಳಿಗೆಲ್ಲ ಹೆಣ್ಣೇ ಬಲಿಪಶು, ಕನಿಷ್ಠ ಕಾಂಡೋಮ್ ಬಳಸಿ ಎಂದು ಗಟ್ಟಿದನಿಯಾಗಿ ಸಂಗಾತಿಗೆ ಹೇಳುವ ಧೈರ್ಯವೂ ಅವಳಿಗಿಲ್ಲ. ಸ್ತ್ರೀಲೈಂಗಿಕತೆ ಏಕೆ ಪ್ರತ್ಯೇಕ ಎಂಬುದು ಮುಖ್ಯವಾಗುವುದೇ ಈ ನೆಲೆಗಳಲ್ಲಿ. ಗಂಡಿಗೆ ಅದೊಂದು ಬಿಡುಗಡೆ; ಆದರೆ ಹೆಣ್ಣಿಗೆ ಆ ಕ್ಷಣದಿಂದಲೇ ಬಂಧನ ಆರಂಭವಾಗುತ್ತದೆ. ಲೈಂಗಿಕತೆಯ ಒಂದು ಹಂತವಾದ ಋತುಚಕ್ರ ಅವಳ ಬದುಕಿನ ಕಾಲುಭಾಗವನ್ನೇ ಯಾತನಾಮಯವಾಗಿಸಿದರೆ, ಗರ್ಭಧರಿಸುವ ಇಲ್ಲವೆ ಧರಿಸದಿರುವ ಸಂಗತಿಗಳು ಒತ್ತಡವನ್ನು ಬದುಕಿನ ಮೇಲೆ ಹೇರುತ್ತವೆ. ಲೈಂಗಿಕತೆ ಎಂಬುದು ಪರಸ್ಪರ ಅವಲಂಬನೆ, ಅಲ್ಲಿ 'ವ್ಯಕ್ತಿ'ಯಿಂದ ಬಿಡುಗಡೆ ಪಡೆಯುವ ವಿಶಿಷ್ಟ ಆಯಾಮವಿದೆ ಎಂಬ ಅಂಶದ ಕುರಿತು ಯಾರೂ ಚಿಂತಿಸುವುದೇ ಇಲ್ಲ. ಗಂಡಿಗೂ ಕೂಡ ಅದು ಹೆಣ್ಣಿನ ಮೇಲೆ ಅಧಿಕಾರ ಸ್ಥಾಪಿಸುವ ಅಂಶವೇ ಹೊರತು ಬಿಡುಗಡೆಯ ಕ್ರಿಯೆಯಲ್ಲ.

ಹೆಣ್ಣು ಏಕೆ ಲೈಂಗಿಕ ಹಿಂಸೆ ಸಹಿಸುತ್ತಾಳೆ*

ಕಾರಣ	ಶೇಕಡವಾರು
ಅನಿವಾರ್ಯತೆಗೆ	೭೧
ಗಂಡಿನ ಹಕ್ಕು ಎಂಬ ಭಾವ	೪೧
ಧಾರ್ಮಿಕ ಕಾರಣಗಳಿಂದಾಗಿ	೧೫
ಬದಲಾವಣೆ ನಿರೀಕ್ಷೆ	೧೭
ಸಂಸಾರದ ಹಿತದೃಷ್ಟಿಯಿಂದ	೧೬
ವಿಚ್ಛೇದನಕ್ಕೆ ಹೆದರಿ	೧೩
ಆರ್ಥಿಕ ಅವಲಂಬನೆಗಾಗಿ	೧೯

ವಿಶ್ವ ಆರೋಗ್ಯ ಸಂಸ್ಥೆ ಸಮೀಕ್ಷೆ ೨೦೦೫.

-೩-

ಲೈಂಗಿಕತೆಯ ಅರಿವು ಹೊಸ ಪೀಳಿಗೆಯ ಮಹಿಳೆಯರಲ್ಲಿ ಹೇಗೆ ಸಾಧ್ಯವಾಗುತ್ತಿದೆ ಎಂಬುದು ಈ ಚರ್ಚೆಯ ಮುಂದಿನ ನೆಲೆ. ೧೦-೨೪ ವರ್ಷದ ಒಳಗಿನ ಮಹಿಳೆಯರನ್ನು ಕೇಂದ್ರವಾಗಿರಿಸಿ ರಾಷ್ಟ್ರೀಯ ಕುಟುಂಬ ಸಮೀಕ್ಷೆ (NFHS) ಹಲವಾರು ಕುತೂಹಲಕರ ಅಂಶಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಈ ವಯೋಮಾನದಲ್ಲಿ ಈಗಲೂ ಹೆಚ್ಚಿನ ಗ್ರಾಮೀಣ ಯುವತಿಯರು ವಿವಾಹವಾಗುತ್ತಿದ್ದಾರೆ. ಅವರಲ್ಲಿ ಲೈಂಗಿಕತೆ ಕುರಿತು ಶೇ. ೨೭ರಷ್ಟು ಜನಕ್ಕೆ ಅರಿವು ಉಂಟಾಗಿದೆ. ಕನಿಷ್ಠ ಅವರು ತಮ್ಮ ಗಂಡಂದಿರ ಹಿಂಸೆಯನ್ನು ಪ್ರತಿಭಟಿಸಬಲ್ಲವರಾಗಿದ್ದಾರೆ. ಗರ್ಭ ಧರಿಸುವುದನ್ನು ವಿಳಂಬಿಸುವ ತಮ್ಮ ಹಕ್ಕನ್ನು ಪ್ರತಿಪಾದಿಸಬಲ್ಲವರಾಗಿದ್ದಾರೆ. ಶೇ. ೮ರಷ್ಟು ಜನಕ್ಕೆ ಲೈಂಗಿಕ ಚಟುವಟಿಕೆಯಲ್ಲಿನ ಸುರಕ್ಷತೆ ಬಗ್ಗೆ ಸಂಪೂರ್ಣ ಅರಿವಿದೆ.

ಲೈಂಗಿಕ ಚಟುವಟಿಕೆ ಸಮೀಕ್ಷೆ

ವಯೋಮಾನ	ಮಹಿಳೆಯರು	ಪುರುಷರು
೧೫ವರ್ಷಕ್ಕೇ ವಿವಾಹವಾದವರ[a] ಶೇಕಡವಾರು ಅನುಭವ (ತೃಪ್ತಿ)	೮.೯	ಗೊತ್ತಿಲ್ಲ
೧೮ನೇ ವರ್ಷಕ್ಕೆ ವಿವಾಹವಾಗಿರುವವರ ಲೈಂಗಿಕ ತೃಪ್ತಿ ಪ್ರಮಾಣ	೨೩.೫	ಗೊತ್ತಿಲ್ಲ
೨೪ನೇ ವರ್ಷದ ನಂತರ ವಿವಾಹವಾದವರ[b] ಲೈಂಗಿಕ ತೃಪ್ತಿ ಪ್ರಮಾಣ	೨೫.೫	೨೬.೮
ವಿವಾಹ ವರ್ಷ ಲೈಂಗಿಕ ಅನುಭವ[c] (ಮುಂಬೈನಗರದಲ್ಲಿ)	೩.೦	೨೬.೦

ಮೂಲ:

National Family Health Survey-2007

a. Registrar General India 2004

b. @Abraham and Kumar 1999

c. Alexander 2006

ಮುಖ್ಯವಾದ ಸಂಗತಿ ಎಂದರೆ ಏಡ್ಸ್ ಕುರಿತ ಪ್ರಚಾರವೂ ಸೇರಿದಂತೆ ನಡೆಯುತ್ತಿರುವ ಸಾರ್ವಜನಿಕ ಆಂದೋಲನಗಳಿಂದ ಯುವ ಜನಾಂಗದಲ್ಲಿ ಲೈಂಗಿಕತೆ ಕುರಿತ ಅರಿವಿನ ಪ್ರಮಾಣ ಹೆಚ್ಚಾಗುತ್ತಿದೆ. ಗಂಡು-ಹೆಣ್ಣಿನ ನಡುವಿನ ಸಂಬಂಧ ಆರೋಗ್ಯಕರವಾಗಿ ಬದಲಾವಣೆ ಪಡೆಯುತ್ತಿದೆ. ಆದರೆ ಸುಲಭವಾಗಿ ದೊರಕುವ ಇಂಟರ್‌ನೆಟ್, ಆ ಮೂಲಕ ಸಿಗುವ ತಪ್ಪು ಲೈಂಗಿಕ ಚಿತ್ರಣಗಳತ್ತ ಆಕರ್ಷಿತರಾಗುತ್ತಾರೆ. ಇದು ಆರೋಗ್ಯಕರ ಚಿಂತನೆ ಬೆಳೆಯುವ ಮೊದಲೇ ದಾರಿ ತಪ್ಪಲು ಕಾರಣವಾಗುತ್ತಿದೆ. ಸಾಂಪ್ರದಾಯಿಕ ಮನೋಭಾವ ಕುಸಿಯುತ್ತಿರುವ ಮಹಾನಗರ ಪ್ರದೇಶದಲ್ಲಿ ಸ್ತ್ರೀಯರು ವಿವಾಹಪೂರ್ವ ಪ್ರಣಯದತ್ತ ಆಕರ್ಷಿತವಾಗುವ ಪ್ರಮಾಣ ಹೆಚ್ಚಾಗುತ್ತಿದೆ, ಮಾತ್ರವಲ್ಲ ಲೈಂಗಿಕ ಕ್ರಿಯೆಯತ್ತ ಆಸಕ್ತರಾದ ಪ್ರಮಾಣವೂ ಕಾಣಿಸುತ್ತಿದೆ. ಈ ಅಂಶ ಮೂಡುತ್ತಿರುವ ಆರೋಗ್ಯಪೂರ್ಣ ಚಿತ್ರಣ ಕುಸಿಯಲು ಕಾರಣವಾಗ ಬಲ್ಲದಾಗಿದೆ. ಲೈಂಗಿಕತೆ ಒಂದು ಆಕರ್ಷಣೆ ಮಾತ್ರವಾಗಿ ಬಿಟ್ಟರೆ ಅದು ತಾತ್ಕಾಲಿಕವಾಗಿ ಪುರುಷರನ್ನು ಕಾಡಬಹುದು. ಆದರೆ ಹೆಣ್ಣಿನ ಬದುಕಿನ ಮೇಲೆ ಶಾಶ್ವತ ಪರಿಣಾಮ ಬೀರಬಲ್ಲದು. ಲೈಂಗಿಕತೆಯ ಸ್ವರೂಪ ಅದರ ಜೈವಿಕ ಲಕ್ಷಣಗಳಲ್ಲಿ ಮಾತ್ರ ಇಲ್ಲ ಎಂಬ ಅರಿವು ಮೂಡುವುದು ಈಗ ಅಗತ್ಯವಾಗಿದೆ. ಲೈಂಗಿಕ ಅರಿವು ಹೆಚ್ಚಾಗುತ್ತಿದೆ ಎನ್ನುವ ಸಂದರ್ಭ ದಲ್ಲೇ ಅತ್ಯಾಚಾರದ ಪ್ರಕರಣಗಳೂ ಹೆಚ್ಚಾಗುತ್ತಿವೆ ಎಂಬುದನ್ನು ನಾವು ಮರೆಯಬಾರದು. ಈ ಚರ್ಚೆಯ ಉದ್ದೇಶ ಲೈಂಗಿಕ ಶಿಕ್ಷಣದ ಹೆಸರಿನಲ್ಲಿ ತರಲು ಯತ್ನಿಸುತ್ತಿರುವ ಜೈವಿಕ ವಿವರಣೆಯ ಪರವಾದದ್ದಲ್ಲ, ಒಟ್ಟು ಸಾಂಸ್ಕೃತಿಕ ಆಯಾಮದಲ್ಲಿ ಹೆಣ್ಣು ತನ್ನತನ ಉಳಿಸಿಕೊಳ್ಳಬೇಕು ಎಂಬುದರ ಪರವಾದದ್ದೂ ಆಗಿದೆ.

-೪-

ಈ ಎಲ್ಲಾ ಚರ್ಚೆಯ ಹಿನ್ನೆಲೆಯಲ್ಲಿ ಗುರುತಿಸಬಹುದಾದ ಅಂಶ ಗಳೆಂದರೆ ಲೈಂಗಿಕತೆಗೆ ಇದ್ದ ಧಾರ್ಮಿಕ ಪಾವಿತ್ರ್ಯತೆಯ ಲೇಪ ಕಳಚುತ್ತಿದೆ. ಅದಕ್ಕಿದ್ದ ಸಾಮಾಜಿಕ ಕಟ್ಟುಪಾಡುಗಳು ಸಡಿಲವಾಗುತ್ತಿವೆ. ಆರ್ಥಿಕ ವಾಗಿಯೇ ಹೆಣ್ಣು ಗಟ್ಟಿಯಾಗುವ ಪ್ರಕ್ರಿಯೆ ಆರಂಭವಾಗುತ್ತಿರುವುದರಿಂದ ಕುಟುಂಬವನ್ನು ಕಾಪಾಡಿಕೊಳ್ಳುವ ಸಾಂಸ್ಕೃತಿಕ ಪ್ರಶ್ನೆ ಹಿನ್ನೆಲೆಗೆ ಹೋಗುತ್ತಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸ್ತ್ರೀ ಲೈಂಗಿಕತೆ ಕುರಿತ ಆರೋಗ್ಯಕರ ಚರ್ಚೆಗಳು ನಡೆಯಬೇಕಾದ ಅನಿವಾರ್ಯತೆ ಎದುರಾಗಿದೆ. ಮುಖ್ಯವಾಗಿ, ಈ ಕುರಿತ ಚರ್ಚೆ ಹೆಚ್ಚು ಪಾರದರ್ಶಕವಾಗಬೇಕಿದೆ. ವೈಜ್ಞಾನಿಕ ತಳಹದಿ ಎಲ್ಲಾ ಹಂತದಲ್ಲೂ ಲಭಿಸಬೇಕಾಗಿದೆ. ಎರಡನೆಯ ದಾಗಿ ಈ ಚರ್ಚೆ ವ್ಯಕ್ತಿ ಹಂತದಲ್ಲೇ ಸೀಮಿತವಾಗದೆ ಸಾಮಾಜಿಕ ಆಯಾಮ ಪಡೆದುಕೊಳ್ಳಬೇಕಿದೆ. ಶಾಲೆಗಳಲ್ಲಿ ಹುಡುಗಿಯರು ಎದುರಿಸುವ ತಾರತಮ್ಯಗಳು, ಕಛೇರಿಗಳಲ್ಲಿ ನಡೆಯುವ ಲೈಂಗಿಕ ಕಿರುಕುಳಗಳು. ಅವು ಒಟ್ಟಾಗಿ ಲೈಂಗಿಕ ಗ್ರಹಿಕೆಯ ಮೇಲೆ ಮಾಡುವ ಪರಿಣಾಮ ಇವೆಲ್ಲವೂ ಚರ್ಚೆಯ ನೆಲೆಯಲ್ಲಿ ಬರಬೇಕಾಗಿದೆ.

ಕೊನೆಯದಾಗಿ, ಸ್ತ್ರೀ ಲೈಂಗಿಕತೆಯ ಪರಿಕಲ್ಪನೆಯನ್ನು ತಾತ್ವಿಕವಾಗಿ ಹೆಚ್ಚು ಸ್ಪಷ್ಟ ನೆಲೆಗಳಲ್ಲಿ ವಿಶ್ಲೇಷಿಸಬೇಕಾಗಿದೆ. ಸಾಮಾಜಿಕ ಬದಲಾವಣೆ ಹಿನ್ನೆಲೆಯಲ್ಲಿ ಅದನ್ನು ಚಲನಶೀಲವಾಗಿಸಬೇಕಾಗಿದೆ (ತಡವಾಗುತ್ತಿರುವ ಹೆಣ್ಣಿನ ವಿವಾಹದ ವಯಸ್ಸು, ಮೊದಲ ಗರ್ಭವನ್ನು ಮುಂದೂಡುವ ಯತ್ನಗಳು, ವಿವಾಹಬಾಹಿರ ಸಂಬಂಧಗಳತ್ತ ಕಾತುರ ಇವೆಲ್ಲವೂ ಸೇರುವಂತೆ). ಸೈದ್ಧಾಂತಿಕವಾಗಿ ಲೈಂಗಿಕತೆ, ಸಂತಾನಧಾರಣೆ, ಏಡ್ಸ್ ಮುಂತಾದ ಲೈಂಗಿಕ ರೋಗಗಳು ಇವೆಲ್ಲವೂ ವಿಭಿನ್ನ ಕಲ್ಪನೆಗಳು ಎಂಬುದು ವಿವೇಚಿಸಲ್ಪಡಬೇಕಾಗಿದೆ. ಎಲ್ಲಿಯವರೆಗೆ ಹೆಣ್ಣು ತನ್ನ ಲೈಂಗಿಕ ಹಕ್ಕುಗಳ ಕುರಿತು ಜಾಗೃತವಾಗುವುದಿಲ್ಲವೊ ಅಲ್ಲಿಯವರೆಗೂ ಶೋಷಣೆಗೆ ರಹದಾರಿ ತೆರೆದೇ ಇರುತ್ತದೆ. ಈ ಕಾರಣದಿಂದಲೇ ಇಂಥ ಚರ್ಚೆಗೆ ಮಹತ್ವವಿದೆ.

ಹೆಚ್ಚಿನ ಓದಿಗಾಗಿ


1. Assaad M & Brucej (1997) Empowering the Next generation (SEEDS 19, Population Council)
2. Ganju D & Jejeeboy. S 2007, Young People Towards a Health Future (Report of the National Consultation of India)
3. Khan M.E, Robu. Hossain S.M "Violence Against women and its impact on women's lives" (The Journal of Family Welfare, October 2000)
4. The Intimate Enemy: Gender violence and Reproductive Health Panos Briefing No. 27 March 2007.
5. Shireen-J. Jeejeeboy, Interventions Addressing the sexual and reproductive health of young people: what works

(The Journal of Family Welfare. VOL. 52)

❑

"...ನಿಧಾನವಾಗಿ ಪುರುಷ ಲೋಕದ ಎರಡು ಕೋಣೆಗಳು ಕಾಣಿಸಿದವು ಮೈರೆಯ ಕಣ್ಣುಗಳಿಗೆ .... ಭೂತದ ನೇಮಗಳ ಸಂದರ್ಭಗಳಲ್ಲಿ ತೆಂಬರೆ ಕಟ್ಟಿಕೊಂಡು ಭೂತದ ಸಾಮಾನು ಹೊತ್ತುಕೊಂಡು ಗಂಡ ಪಿಜಿನನನ್ನು ಹಿಂಬಾಲಿಸುತ್ತಿದ್ದ ಮೈರೆ, ಅವನು ಐತ್ತಕ್ಕೆ ಕುಳಿತಾಗಲೆಲ್ಲ ಅವನ ಕಲಾ ಬದುಕನ್ನು ತುಂಬುತ್ತಿದ್ದಳು, ತೆಂಬರೆ ಬಡಿದು ಸಂದಿಯನ್ನು ಹೇಳುತ್ತಾ ಐತ್ತದ ಕೆಲಸಕ್ಕೆ ನಾಂದಿ ಹಾಡುವಲ್ಲಿಂದ ತೊಡಗಿ ತೆಂಗಿನ ಗರಿಗಳನ್ನು ಸೀಳಿ, ಕತ್ತರಿಸಿ ಸೊಂಟದ ಕಿರಿ, ಜಕ್ಕೆಲಣೆ, ಅಣಿ ಇವೆಲ್ಲವನ್ನೂ ನೇಯ್ದು ಹಗೆದು ಸಿದ್ಧ ಮಾಡುತ್ತಿದ್ದಳು. ಆದರೂ ಗಂಡ ಪಿಜಿನ ಕೇಂದ್ರದಲ್ಲಿ, ಹೆಂಡತಿ ಮೈರೆ ಪರಿಧಿಯಲ್ಲಿ. ಫೋಟೊಗ್ರಾಫರ್‌ಗಳೂ, ವೀಡಿಯೊ, ಸಂಶೋಧಕರು, ಸಂದರ್ಶಕರು ಎಲ್ಲರಿಗೂ ಕಾಣುತ್ತಿದ್ದುದು ಪಿಜಿನ ಮಾತ್ರ.... ಅವನೇ ಭೂತ, ಅವನೇ ಆರಾಧನೆಯ ಕೇಂದ್ರ ವ್ಯಕ್ತಿ. ಹೌದು, ಹೆಣ್ಣಿನ ಎಲ್ಲಾ ಕೌಶಲವನ್ನು ಸಾಮಾನ್ಯೀಕರಿಸಿ ಅಂಚಿಗೆ ತಳ್ಳಲಾಗುತ್ತದೆ, ಅಪ್ರಧಾನವಾಗಿ ಗ್ರಹಿಸಿ ನಿರ್ಲಕ್ಷಿಸಲಾಗುತ್ತದೆ....".

ವೀರಪ್ಪ ಮೊಯಿಲಿ
('ತೆಂಬರೆ' ಕಾದಂಬರಿಯಿಂದ)



ಮಿಲಿಟರಿ ಮತ್ತು ಸೆಕ್ಸೋದ್ಯಮ

ಮಿಲಿಟರಿ ಮತ್ತು ಸೆಕ್ಸೋದ್ಯಮದ ನೆಂಟಿಗಾಗಿ ಯುದ್ಧ ನಡೆಯಬೇಕು ಎಂದೇನಿಲ್ಲ; ಆಗ್ನೇಯ ಏಷಿಯಾದಲ್ಲಿ 30 ವರ್ಷಗಳ ವಿದ್ಯಮಾನಗಳೇ ಇದನ್ನ ಸೂಚಿಸುತ್ತಿವೆ. (ಸ್ಟ್ರಾಡೆವಾಂಟ್ ಮತ್ತು ಸ್ಟೋಲ್ಫ್‌ಜಪಸ್ 1992; ಟ್ರೌಂಗ್ 1990). ಮಿಲಿಟರಿ ಪಡೆಗಳು ಮಹಿಳೆಯರನ್ನು ಕಾಮದಾಹಕ್ಕಾಗಿ ಬಳಸಿಕೊಳ್ಳುತ್ತಿರುವುದು ಅನೇಕ ಶತಮಾನಗಳಿಂದ ನಡೆದುಕೊಂಡು ಬಂದಿದೆ. ಇದು ಮಿಲಿಟರಿ ಸಂಸ್ಕೃತಿಯ ಬಲಾತ್ಕಾರ ಲೈಂಗಿಕತೆಯನ್ನ ತೋರುತ್ತದೆ.

ಇತ್ತೀಚಿನ ಉದಾಹರಣೆ ಎಂದರೆ, ಇಂಟರ್‌ನ್ಯಾಷನಲ್ ಚಿಲ್ಡ್ರನ್ಸ್ ರೈಟ್ಸ್ ಮಾನಿಟರ್ ಪತ್ರಿಕೆ ಪ್ರಕಟಿಸಿದ ವರದಿಯ ಪ್ರಕಾರ ಕಾಂಬೋಡಿಯಾ ದೇಶದಲ್ಲಿರುವ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಗಳ ದೆಸೆ. ವೇಶ್ಯಾಗಾರಿಕೆಯ ಪ್ರಮಾಣ ತೀವ್ರ ಹೆಚ್ಚಳಗೊಂಡಿದೆ; ಇವರಲ್ಲಿ ಬಹುಪಾಲು ಮಕ್ಕಳು (ಆರ್ನ್‌ವಿಗ್ 1993–94). ಆರೋಗ್ಯ ಅಧಿಕಾರಿಯೊಬ್ಬರ ಅಂದಾಜಿನ ಪ್ರಕಾರ ಫೋಮ್ ಪೆನ್ಹ್ ಪಟ್ಟಣದಲ್ಲಿ 1991ರಲ್ಲಿ ವೇಶ್ಯಾಗೃಹಗಳಲ್ಲಿ 6000 ಇದ್ದ ಮಹಿಳೆಯರು ಮತ್ತು ಮಕ್ಕಳ ಪ್ರಮಾಣ 1992ರ ವೇಳೆಗೆ 20,000ಕ್ಕೆ ಏರಿತ್ತು. ಕಾನೆ ಅವರು ಗುರುತಿಸಿರುವಂತೆ (1998–99) ವೇಶ್ಯಾಗೃಹಗಳಲ್ಲಿರುವ ಪ್ರತಿ ಮೂವರು ಮಹಿಳೆಯರ ಪೈಕಿ ಒಬ್ಬಳು ಅಪ್ರಾಪ್ತ ಬಾಲಕಿ.

ಆಕೆ ಇನ್ನೊಂದು ಉದಾಹರಣೆ ಕೊಡುತ್ತಾರೆ: ಮೊಜಾಂಬಿಕ್ ದೇಶದಲ್ಲಿದ್ದ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಗಳ ಇಟಾಲಿಯನ್ ತುಕಡಿಯು, ಸ್ಥಳೀಯ ವೇಶ್ಯಾಗೃಹಗಳನ್ನು ಬಳಸಿಕೊಂಡಿದ್ದಷ್ಟೇ ಅಲ್ಲದೇ ಅದನ್ನ ವ್ಯವಸ್ಥಿತವಾಗಿ, ತಮಗೆ ಅನುಕೂಲಕರ ರೀತಿಯಲ್ಲಿ ಸಂಘಟಿಸಿಕೊಂಡಿದ್ದರು (ಜೆಪಿ48–9). ಬೋಸ್ನಿಯಾದಲ್ಲಿ ವೇಶ್ಯಾಗೃಹ ಸೇರಿದವರು ಬಡತನದಿಂದ ನೊಂದವರು, ಉಳಿದವರು ತಮ್ಮದೇ ಜನಾಂಗದ ಪುರುಷರ ಅತ್ಯಾಚಾರಕ್ಕೆ ಒಳಗಾದವರು ಮದುವೆಯಾಗದೇ ಹಾಗೇ ಉಳಿಯಬೇಕಾಯಿತು.

ಇದು ಮಹಿಳೆಯರು ಮತ್ತು ಬಾಲಕಿಯರನ್ನು ವೇಶ್ಯಾಜಾಲಕ್ಕೆ ಸೆಳೆದುಕೊಳ್ಳುವ ರೀತಿ. ಯುದ್ಧ, ಆಂತರಿಕ ಕಲಹಗಳು ಮಹಿಳೆ ಮತ್ತು ಬಾಲಕಿಯರ ಬದುಕುಗಳನ್ನ ಮತ್ತಷ್ಟು ಸೂಕ್ಷ್ಮಗೊಳಿಸುತ್ತವೆ. ದುರಂತವೆಂದರೆ ಎರಡು ದಶಕಗಳ ಹಿಂಸೆ, ವಿನಾಶ ಮತ್ತು ದಮನದ ನಂತರ ಕಾಂಬೋಡಿಯಾ ಹೊಸ ಸಮಾಜವಾಗಿ ಪರಿವರ್ತನೆಗೊಳ್ಳುವ ಕಾಲಕ್ಕೆ ಅಲ್ಲಿ ಲೈಂಗಿಕ ಮಾರುಕಟ್ಟೆಗಳ ಉಪಟಳ ಪ್ರಾರಂಭವಾಗಿದೆ. ಇದು ಯುದ್ಧಕಾಲವಲ್ಲ ಶಾಂತಿಕಾಲ ಎಂದು ಯಾರಾದರೂ ವಾದಿಸಬಹುದು, ಆದರೆ ಶಾಂತಿಪಾಲನಾ ಪಡೆಗಳೇ ಈ ಲೈಂಗಿಕ ಮಾರುಕಟ್ಟೆಗಳನ್ನ ಹುಟ್ಟುಹಾಕುತ್ತಿವೆ. [ಆರ್ನ್‌ವಿಗ್ (1993–96)]

ಮಿಲಿಟರಿ ಮತ್ತು ವಯಸ್ಕ ವೇಶ್ಯಾಗಾರಿಕೆ ಕುರಿತಂತೆ ಸಾಕಷ್ಟು ಲಿಖಿತ ದಾಖಲೆಗಳು ಸಿಗುತ್ತವೆ. ಆದರೆ ಬಾಲಕಿಯರ ಲೈಂಗಿಕ ಶೋಷಣೆ ಬಗ್ಗೆ ಅಷ್ಟು ಗಮನ ಸಾಧ್ಯವಾಗಿಲ್ಲ. ಶಸ್ತ್ರಸಜ್ಜಿತ ಯುದ್ಧಗಳು ಮತ್ತು ಜನತೆಯ ಸ್ಥಳಾಂತರದಿಂದ ಮಕ್ಕಳು ತಮ್ಮ ಕುಟುಂಬಗಳಿಂದ ಪ್ರತ್ಯೇಕಗೊಳ್ಳುವ ಸಂದರ್ಭಗಳು ಸೃಷ್ಟಿಯಾಗುತ್ತವೆ. ಇದು ಅವರನ್ನು ಅಸಹಾಯಕ ಪರಿಸ್ಥಿತಿ ಮತ್ತು ಶೋಷಣೆಗೆ ಸುಲಭವಾಗಿ ಸಿಲುಕಿಸುತ್ತದೆ. ನಿರಾಶ್ರಿತ ಮತ್ತು ಮರುವಸತಿ ಶಿಬಿರಗಳಲ್ಲಿ ಮಕ್ಕಳು ಒಪ್ಪತ್ತಿನ ಊಟಕ್ಕಾಗಿ ಮೈಮಾರಿಕೊಂಡ ಅನೇಕ ಪ್ರಕರಣಗಳನ್ನು ಕಾನೆ ಅವರು ಉದಾಹರಿಸುತ್ತಾರೆ. ಯುದ್ಧಕಾಲದಲ್ಲಿ ನಡೆಯುವ ಶಿಶು ಲೈಂಗಿಕ ಶೋಷಣೆ ಬಗ್ಗೆ ವಿಶ್ವಸಂಸ್ಥೆಯ ಇತ್ತೀಚಿನ ಅವಲೋಕನದ ಸಾರಾಂಶವನ್ನು ಅವರು ಒದಗಿಸಿದ್ದಾರೆ. ಪರಿಶೀಲಿಸಿರುವ ಎಲ್ಲ 12 ಪ್ರಕರಣಗಳ ಅಧ್ಯಯನದ ಪ್ರಕಾರ ಮಕ್ಕಳ ಲೈಂಗಿಕ ಶೋಷಣೆ ವಿಚಾರದಲ್ಲಿ, ಯುದ್ಧದ ಎರಡೂ ಬಣಗಳಿಗೆ ಸೇರಿದ ಯೋಧರು ಅಪರಾಧಿಗಳು. ಅಂಗೋಲ, ಬೋಸ್ನಿಯಾ, ಕಾಂಬೋಡಿಯಾ, ಕ್ರೋಷಿಯಾ, ಮೊಜಾಂಬಿಕ್ ಮತ್ತು ರುವಾಂಡ ಪ್ರಕರಣಗಳಲ್ಲಿ ಮಕ್ಕಳ ಲೈಂಗಿಕ ವ್ಯಾಪಾರದ ಜೊತೆಗೆ ವಿಶ್ವಸಂಸ್ಥೆ ಶಾಂತಿಪಾಲನಾ ಪಡೆಗಳ ನೆಂಟು ಕಂಡುಬಂದಿದೆ. (ಕಾನೆ 1998:46)

ಆಗ್ನೇಯ ಏಷಿಯಾದ ವಯಸ್ಕ ವೇಶ್ಯಾಗಾರಿಕೆಯಲ್ಲಿ ಮಿಲಿಟರಿ ಪಾಲುದಾರಿಕೆ ಇರುವಂತೆ, ಸೆಕ್ಸ್ ಪ್ರವಾಸೋದ್ಯಮದಿಂದ ಈ ಸಮಸ್ಯೆ ನಾಗರೀಕ ಜೀವನಕ್ಕೂ ಕಾಲಿಟ್ಟಿದೆ; ಸೆಕ್ಸ್ ಪ್ರವಾಸಕ್ಕೆಂದೇ ನಿಗದಿ ಪಡಿಸಲಾದ ಸ್ಥಳಗಳಲ್ಲಿ ಲೈಂಗಿಕ ಹಸಿವನ್ನು ನೀಗಿಕೊಳ್ಳಲು ಮಕ್ಕಳು ಅಗ್ಗದ ದರಕ್ಕೆ ಸಿಗುತ್ತಾರೆ.

ಸ್ಥಳೀಯ, ರಾಷ್ಟ್ರೀಯ ಆರ್ಥಿಕತೆಗಳನ್ನು ಮಹಿಳೆ ಮತ್ತು ಮಕ್ಕಳ ದೇಹಗಳನ್ನು ಬಳಸಿಕೊಂಡು ಪರಿವರ್ತಿಸುವ ಇಂತಹ ಪುನರಾವರ್ತಿತ ಮಾದರಿಗಳಿಂದ ಮಿಲಿಟರಿ ನೆಲೆಗಳು, ಸೈನಿಕರ ವರ್ತನೆ, ವಿಶ್ವಸಂಸ್ಥೆ ಶಾಂತಿ ಪಡೆಗಳು ಮತ್ತು ಕದನ ಪರಿಹಾರಗಳ ಬಗ್ಗೆ ಗಂಭೀರ ಪ್ರಶ್ನೆ ತಲೆದೋರಿದೆ. ವಿಶ್ವಸಂಸ್ಥೆ ಶಾಂತಿ ಪಡೆಗಳಿಗೆ ವೇಶ್ಯಾಗೃಹಗಳ ಜೊತೆ ಇರುವ ನಂಟಿನ ವಿಷಯದಲ್ಲಿ ಕೆಲವು ನಿಯಮಗಳನ್ನಾದರೂ ಅಳವಡಿಸಿಕೊಳ್ಳಬೇಕಿತ್ತು. ಲೈಂಗಿಕ ಹಿಂಸೆಯ ನಂತರ ಮಕ್ಕಳು ಮತ್ತು ಮಹಿಳೆಯರ ಬೆಂಬಲಕ್ಕೆ ವಿಶ್ವಸಂಸ್ಥೆ ನಿಯೋಗದಲ್ಲಿ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಒದಗಿಸಬೇಕಿತ್ತು.

ತಮ್ಮ ಮೇಲಿನ ಶೋಷಣೆ ವಿರುದ್ಧ ಆಗ್ನೇಯ ಏಷಿಯಾದ್ಯಂತ ಪ್ರತಿರೋಧ ಕಾಣಬರುತ್ತಿದೆ. 2ನೇ ಮಹಾಯುದ್ಧದಲ್ಲಿ ಜಪಾನಿ ಸೈನಿಕರು ಅಪಹರಿಸಿ, ಲೈಂಗಿಕ ದಾಸಿಯರನ್ನಾಗಿ ಮಾಡಿಕೊಂಡಿದ್ದ ಮಹಿಳೆಯರು ತಮ್ಮ ಬದುಕಿನ ಘನತೆಯ ಹಕ್ಕುಗಳ ಪ್ರಶ್ನೆ ಎತ್ತಿದ್ದಾರೆ (ಏಷಿಯಾ ಮಹಿಳಾ ಮಾನವ ಹಕ್ಕುಗಳ ಪರಿಷತ್ತು 1993–1996, ಫಿಲಿಪಿನೋ ಮಹಿಳಾ ಸಂಘಟನೆ).

ಅಮೆರಿಕ, ಫಿಲಿಪಿನೊ ಮಿಲಿಟರಿ ನೆಲೆಗಳಿಂದ ಸೈನಿಕರನ್ನು ಹಿಂದಕ್ಕೆ ಕರೆಸಿಕೊಂಡ ನಂತರ ಅಲ್ಲಿನ ಮಹಿಳೆಯರು ಅಮೆರಿಕಾದ ಪುರುಷರಿಂದ ಹೆತ್ತ ಮಕ್ಕಳೊಂದಿಗೆ ತಬ್ಬಲಿಗಳಾಗಿದ್ದಾರೆ. ಇಂತಹ ವ್ಯಾಪಕ ಶೋಷಣೆ ಮತ್ತು ಪುರುಷ ಪ್ರಧಾನ ಮಿಲಿಟರಿ ಸಂಸ್ಕೃತಿಗೆ ಅವಶ್ಯವಿರುವ ಅಶ್ಲೀಲ ಚಿತ್ರ ಮತ್ತು ಲೈಂಗಿಕ ಹಿಂಸಾಚಾರಕ್ಕೆ ಮಿಲಿಟರಿಯನ್ನು ಹೊಣೆಯಾಗಿಸುವುದು ಮಿಲಿಟರಿ ಸಂಸ್ಕೃತಿಗೆ ಸ್ತ್ರೀವಾದವು ಒಡ್ಡುವ ಪ್ರತಿಕ್ರಿಯೆಯ ನಿರ್ಣಾಯಕ ಅಂಶ.

ಮೂಲ : *Wars against Women: States of Conflict; Gender, Violence and Resistance Ed. Susie Jacobson, Ruth Jacobson. Jennifer Marchbank.*

ನೀವೂ ಓದಿ

ಡಾ. ಆರ್. ಸುನಂದಮ್ಮರವರ ಕಾದಂಬರಿ 'ದ್ವಿತ್ವ' ಹಾಗೂ ಲೇಖನಗಳ ಸಂಕಲನ 'ಮಹಿಳಾ ಸಂಸ್ಕೃತಿ'

ಸಿ.ಜಿ. ಉಷಾದೇವಿ

'ದ್ವಿತ್ವ'
ಲೇ: ಡಾ. ಆರ್. ಸುನಂದಮ್ಮ
ಪ್ರಕಾಶಕರು: ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು
ಬೆಲೆ : ರೂ. 300/-

'ದ್ವಿತ್ವ' ಕಾದಂಬರಿಯನ್ನು ಬರೆಯಲು ಸ್ಫೂರ್ತಿ ಮತ್ತು ಶಕ್ತಿ ತಾನು ಬೆಳೆದ ಪರಿಸರ ಹಾಗೂ ಬದುಕುತ್ತಿರುವ ಪರಿಸರ ಕಾರಣವಾಗಿದೆ ಎಂದು ಲೇಖಕಿ ಹೇಳಿದ್ದಾರೆ. ಮಹಿಳಾ ಬದುಕಿನ ಸಂಘರ್ಷ ಮತ್ತು ಸಂಕಟಗಳನ್ನು ಕುರಿತು ಹಾಗೂ ಸಾಮಾಜಿಕ ಅಸ್ತಿತ್ವವನ್ನು ಕುರಿತು ಈ ಕಾದಂಬರಿ ಪ್ರಶ್ನಿಸುತ್ತಾ ಹೋಗುತ್ತದೆ. ಮುನ್ನುಡಿಯನ್ನು ಬರೆದಿರುವ ಕೆ.ವಿ.ನಾರಾಯಣರವರು "ಜಾತಿ ವ್ಯವಸ್ಥೆಯ ಅತ್ಯಂತ ಸಂಕೀರ್ಣ ಮಾದರಿಯೊಂದನ್ನು ಭಿತ್ತಿಯಾಗಿಟ್ಟುಕೊಂಡು ಅದರ ಮುನ್ನೆಲೆಯಲ್ಲಿ ಮಾನವ ಭಾವಲೋಕದ ವಿನ್ಯಾಸಗಳನ್ನು ಚಿತ್ರಿಸುತ್ತದೆ" ಎನ್ನುತ್ತಾರೆ.

ಕಾದಂಬರಿಯ ಪ್ರಧಾನ ವಸ್ತು ಇಬ್ಬರು ಗ್ರಾಮೀಣ ಮಹಿಳೆಯರಾದ ಪುಟ್ಟನಂಜಿ ಹಾಗೂ ಕಲ್ಲಮ್ಮರ ಸಾಂಸಾರಿಕ ಜಗತ್ತು. ಇಬ್ಬರೂ ಜಾತಿಪದ್ಧತಿ ಮತ್ತು ಕೌಟುಂಬಿಕ ನೆಲೆಯ ಪುರುಷ ಪ್ರಾಧಾನ್ಯದ ಸಂಕಷ್ಟಗಳಿಂದ ನೋಯುತ್ತಾರೆ. ಇಬ್ಬರೂ ತಮ್ಮ ಜೀವನದ ಸಮಸ್ಯಾತ್ಮಕ ನೆಲೆಗಳನ್ನು ಎದುರಿಸುವ ರೀತಿ, ಅವರ ಸ್ತ್ರೀತನದ ಅಂತಃಕರಣ ಹಾಗೂ ಬದುಕಿನ ಎಂಥದೇ ಸಂದರ್ಭದಲ್ಲೂ ಬಂದ ಹಾಗೇ ಎದುರಿಸುತ್ತಲೇ ಗಟ್ಟಿಯಾಗಿ ನಿಲ್ಲುವ ಪರಿ ವಿಶಿಷ್ಟವಾಗಿದೆ.

ಕಾದಂಬರಿಯಲ್ಲಿ ವಡಿಗಾನಹಳ್ಳಿ, ವೆಂಕಟಾಪುರ, ಕೋಲಾರ ಈ ಪ್ರದೇಶದ ಕೃಷಿಕ ಸಮಾಜದ ಬದುಕನ್ನು ತೆರೆದಿಡುತ್ತಾರೆ. ಅದರಲ್ಲೂ ದುಡಿಮೆಗಾರ್ತಿ ಹೆಣ್ಣುಮಕ್ಕಳ ಬದುಕಿಗೆ ಇಲ್ಲಿ ವಿಶೇಷ ಒತ್ತು ಇದೆ. ಇವರ ಬದುಕಿನ ವಿವರಗಳನ್ನು ಆ ಪ್ರದೇಶದ ಭಾಷೆಯಲ್ಲೇ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ.

ಸುನಂದಮ್ಮನವರ 'ದ್ವಿತ್ವ' ಅವರ ಮೊದಲ ಕಾದಂಬರಿಯಾಗಿದ್ದೂ ಕನ್ನಡದ ಪ್ರಧಾನ ಕಾದಂಬರಿಗಳ ಸಾಲಿಗೆ ಸೇರ್ಪಡೆಯಾಗುವ ವಿಶಿಷ್ಟತೆಯನ್ನು, ಮಹತ್ವವನ್ನು ಪಡೆದಿದೆ. ಮೂವತ್ತೊಂಬತ್ತು ಅಧ್ಯಾಯಗಳಲ್ಲಿ ಕಾದಂಬರಿ ವಿಸ್ತರಿಸಿದೆ. ಓದುತ್ತಾ ಹೋದಂತೆ ಭಾಷೆಯ ಕಸುವಿನಿಂದ, ಕಥಾವಸ್ತುವಿನ ವಿಶಿಷ್ಟತೆಯಿಂದ, ಗ್ರಾಮೀಣ ನೆಲೆಯ ಸಮರ್ಥ ನಿರೂಪಣೆಯಿಂದ, ನಮ್ಮ ಮನಸ್ಸನ್ನು ಆರ್ದ್ರವಾಗಿ ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನು ಈ ಕಾದಂಬರಿ ಪಡೆದಿದೆ.

ಮುನ್ನೀರಮ್ಮನ ಮೂರನೇ ಮಗ ಕೆಂಪಣ್ಣನ ಸಂಬಂಧಕ್ಕೆ ಬಂದ ಕೆಳಹಟ್ಟಿಯ ಪುಟ್ನಂಜಿ ಹಾಗೂ ಸಂಪ್ರದಾಯವಾಗಿ ಮದುವೆಯಾದ ಕಲ್ಲಮ್ಮರ ಬದುಕು ಇಲ್ಲಿ ಪ್ರಧಾನವಾಗಿದ್ದರೂ ಅಕ್ಕಯ್ಯಮ್ಮನ ವಿಧವೆ ಬದುಕು ಕೂಡ ಮನಸ್ಸನ್ನು ಸೆಳೆಯುತ್ತವೆ.

ಕೆಂಪಣ್ಣ ಹಾವು ಕಚ್ಚಿ ತೀರಿ ಹೋದಾಗ ಪುಟ್ನಂಜಿ ಸಣ್ಣ ಮಗುವಿನ ತಾಯಿ, ಹೆಂಡತಿ ಕಲ್ಲಮ್ಮ ತುಂಬು ಬಸುರಿ. ಗಂಡ ಸತ್ತ ನಂತರ ಇಬ್ಬರೂ ಜೀವನವನ್ನು ಮುಂದುವರೆಸಿದ ರೀತಿ ಗಮನಾರ್ಹ. ಪುಟ್ನಂಜಿ ಒಂದು ಮಾದರಿಯಾದರೆ, ಕಲ್ಲಮ್ಮ ಮತ್ತೊಂದು ಮಾದರಿ. ಪುಟ್ನಂಜಿಯು ಮಗ ಕೆಂಪ, ಮಗಳು ರತ್ನಾಳನ್ನು ನಂಬಿ ತನ್ನ ಬದುಕಿನ ಹೊಸ ಲಯ ಕಾಣುವಳು. ಕಲ್ಲಮ್ಮ ಮಗನನ್ನು ನಂಬಿ ನಿರಾಶಳಾಗಿ, ಮಗನಿಂದಲೂ ಬಿಡುಗಡೆ ಪಡೆದು ಕೊನೆಗೆ ತನ್ನನ್ನು ಆತುಕೊಳ್ಳುವ ಸಂಗಾತಿಯನ್ನು ಪಡೆಯುವ ಮುಖಾಂತರ ಬದುಕಿಗೆ ತಿರುವನ್ನು ನೀಡುತ್ತಾಳೆ.

ಕೃಷಿಕ ಸಮಾಜದ ಮಾತೃಪ್ರಧಾನ ಅಂಶಗಳು ಕ್ರಮೇಣ ಪಿತೃ ಪ್ರಧಾನತೆಗೆ ತಿರುಗಿಕೊಳ್ಳುವ ಅಂಶಗಳನ್ನು ಕಾದಂಬರಿ ಧ್ವನಿಸುತ್ತದೆ. ಮಹಿಳಾ ಸಾಹಿತ್ಯದಲ್ಲಿ, 'ಮಹಿಳಾ ಮಾದರಿ'ಗಳನ್ನು ಹುಡುಕುತ್ತಿರುವ ಈ ಹೊತ್ತಿನಲ್ಲಿ ನಮ್ಮ ಗ್ರಾಮೀಣ ಪ್ರದೇಶದ ದುಡಿಮೆಗಾರ ಹೆಣ್ಣುಮಕ್ಕಳ ದೈನಂದಿನ ವಿವರಗಳನ್ನು ನೀಡುತ್ತಲೇ, ತಮ್ಮ ಬದುಕಿನ ಸಂದರ್ಭಗಳಲ್ಲಿ ಜಾತಿಯನ್ನು, ಸಮಾಜವನ್ನು ಮೀರಿ ಬದುಕನ್ನು ಕಟ್ಟಿಕೊಳ್ಳುವ ರೀತಿ ವಿಶಿಷ್ಟವಾದುದು. ಈ ನೆಲೆಯಲ್ಲಿ ಪುಟ್ನಂಜಿ, ಕಲ್ಲಮ್ಮ ಗ್ರಾಮೀಣ ಸಮಾಜದ ಪದ್ಧತಿ, ಸಂಪ್ರದಾಯಗಳನ್ನು ಮೀರುವ ಬಗೆ ವಿಶಿಷ್ಟವಾಗಿದೆ. ವ್ಯವಸ್ಥೆಯೊಳಗಿದ್ದುಕೊಂಡೇ ಪ್ರತಿಭಟಿಸುವ, ವ್ಯವಸ್ಥೆಯೊಳಗೆ ಬದಲಾವಣೆಯನ್ನು ತಂದುಕೊಳ್ಳುವ 'ಸ್ತ್ರೀಯಾತ್ಮಕತೆ'ಯನ್ನು ಕಾದಂಬರಿಯಲ್ಲಿ ಪ್ರಮುಖವಾಗಿ ಗುರುತಿಸಬಹುದು.

ಮಹಿಳಾ ಸಂಸ್ಕೃತಿ
ಡಾ. ಆರ್. ಸುನಂದಮ್ಮ
ಸಮತಾ ಅಧ್ಯಯನ ಕೇಂದ್ರ, 2005, ಮೈಸೂರು.
ಬೆಲೆ: ರೂ. 80/-

ಮೈಸೂರಿನ 'ಸಮತಾ ಅಧ್ಯಯನ ಕೇಂದ್ರ' ಹೊರತಂದಿರುವ ಈ ಪುಸ್ತಕ ಡಾ॥ ವಿಜಯಾ ದಬ್ಬೆಯವರಿಗೆ ಅರ್ಪಣೆಯಾಗಿದೆ. ಹದಿನೈದು ಲೇಖನಗಳ ಸಂಕಲನ. "ಮಹಿಳಾ ಚಳವಳಿ ನನ್ನನ್ನು ಬೆಳೆಸುತ್ತಾ ಬಂದಿದೆ. ಬದುಕಿನ ಸನ್ನಿವೇಶದ ಅನೇಕ ಸಂಕಟಗಳು ಎದುರಾದಾಗ ಗಟ್ಟಿಗೊಳ್ಳುವಂತೆ ಮಾಡಿ, ಅದರ ಮುಖಾಮುಖಿಯಲ್ಲಿ ಮಹಿಳಾ ಸಂಸ್ಕೃತಿಯ ಶೋಧಕ್ಕಾಗಿ ನಡೆಸಿದ ಹುಡುಕಾಟ, ನೆಲೆಗಾಗಿ ಪರದಾಟ ನಡೆದಾಗಲೇ ಈ ಲೇಖನಗಳು ರೂಪು ಪಡೆದಿವೆ" – ಎಂದಿದ್ದಾರೆ ಲೇಖಕಿ.

1. ಸ್ತ್ರೀ ಕೇಂದ್ರಿತ ಕಾವ್ಯಗಳಾಗಿ ಜನಪದ ರಾಮಾಯಣ ಹಾಗೂ ಜನಪದ ಮಹಾಭಾರತ : ಲಿಖಿತರೂಪದ ಮಹಾಭಾರತ, ರಾಮಾಯಣಗಳು ಪುರುಷಕೇಂದ್ರಿತ, ಪುರುಷಶ್ರೇಷ್ಠತೆಯನ್ನು ಎತ್ತಿ ಹಿಡಿಯುತ್ತವೆ. ಜನಪದ ಸಂಪ್ರದಾಯದಲ್ಲಿ ಹಾಡುಕಟ್ಟಿ ಹಾಡುವ ಕ್ರಿಯೆಯಲ್ಲಿ ಹೆಣ್ಣುಮಕ್ಕಳು ಭಾಗಿಯಾಗಿರುವುದರಿಂದ 'ಅವರ ಬದುಕಿಗೆ ಹತ್ತಿರ'ವೆಂಬಂತೆ ನಿರೂಪಿತವಾಗಿವೆ. ಈ ಕಾವ್ಯಗಳಲ್ಲಿ ನಾಯಕರ ವೀರತ್ವ ಶ್ರೇಷ್ಠತೆ ಕಂಡುಬರುವುದಿಲ್ಲ. ಹೆಣ್ಣಿನ ಸತ್ವ ಮತ್ತು ಧೈರ್ಯವನ್ನು ಹೇಳುತ್ತವೆ. ಇಂತಹ ಕಾವ್ಯವನ್ನು ಹಾಡುವವರು ದುಡಿಯುವ ಮಹಿಳೆಯರು.

ದ್ರಾವಿಡ, ವೈದಿಕ ಸಂಸ್ಕೃತಿಯ ಪ್ರಭಾವಕ್ಕೆ ತೆರೆದುಕೊಳ್ಳದ ಜನವರ್ಗ. ಇಂತಹ ಜನರು ಹಾಡುವ ಕಾವ್ಯಗಳು ಹೆಣ್ಣಿನ ಗುಣಾತ್ಮಕ ಅಂಶಗಳನ್ನು ತೆರೆದು ತೋರುತ್ತವೆ. ಇಲ್ಲಿ ಶೂರ್ಪನಖಿಯನ್ನು ನೋಡಿರುವ ದೃಷ್ಟಿ ಭಿನ್ನವಾಗಿದೆ. ರಾಮನ ಹಿರಿಮೆಗಿಂತ ಸೀತೆಯಿಂದಲೇ ರಾಮನಿಗೆ ಶ್ರೇಯಸ್ಸು ಎಂದು ಈ ಕಾವ್ಯ ವ್ಯಕ್ತಪಡಿಸುತ್ತದೆ.

ಜನಪದ ಮಹಾಭಾರತ ವಿಶಿಷ್ಟ ಕೃತಿ. ದ್ರೌಪದಿ, ಸುಭದ್ರೆ, ಕುಂತಿ, ಅಭಿಮನ್ಯು, ಮತ್ತು ಅರ್ಜುನ ಪಾತ್ರಗಳು ವಿಶೇಷವಾಗಿ ಚಿತ್ರಿತವಾಗಿವೆ. ಇಲ್ಲಿ ಸ್ತ್ರೀಯರ ಮೂರು ಮಾದರಿಗಳನ್ನು ಕಂಡರಿಸಿದ್ದಾರೆ.

ಅ. ವೈದಿಕ ಸಂಸ್ಕೃತಿಯಿಂದ ರೂಪುಗೊಂಡ ಸೀತೆಯ ಮಾದರಿ
ಆ. ಉಪಸಂಸ್ಕೃತಿಗಳ ವಕ್ತಾರಳಾಗಿ ದ್ರೌಪದಿಯ ಮಾದರಿ
ಇ. ಈ ಎರಡರ ಮಿಳಿತದಲ್ಲಿ ಹೊರ ಹೊಮ್ಮಿರುವ ಪಾತ್ರವಾಗಿ ಸುಭದ್ರೆ

2. ಮೌಖಿಕ ಸಾಹಿತ್ಯದಲ್ಲಿ ಲಿಂಗ ಸಮಾನತೆಯ ಸ್ವರೂಪ: ಇವರೆಲ್ಲ ಇಂದಿಗೂ ಜೀವಂತವಾಗಿದ್ದಾರೆ. "ಮೌಖಿಕ ಸಾಹಿತ್ಯವು ಕಾಲದಿಂದ ಕಾಲಕ್ಕೆ, ಬಾಯಿಂದ ಬಾಯಿಗೆ, ಪರಂಪರಾಗತವಾಗಿ ಸಾಗಿಬಂದ ಮಾನವನ ಬದುಕಿನ ಸಮಸ್ತ ವಿಚಾರಗಳನ್ನೊಳಗೊಂಡ ಅಭಿವ್ಯಕ್ತಿ". ಜನಪದ ಸಾಹಿತ್ಯದ ಬಹುಭಾಗದ ಸಾಹಿತ್ಯ ಸ್ತ್ರೀ ಸಂವೇದನೆಯನ್ನು ಉಳ್ಳದ್ದೇ ಆಗಿದೆ. ಹೆಣ್ಣಿನ ನೋವಿನ, ಬಲಿಯ ಕತೆಯೇ ವಸ್ತುವಾಗಿರುವುದು ಕಾಣುತ್ತದೆ. ಮೌಖಿಕ ಸಾಹಿತ್ಯದಲ್ಲಿ ವಿಸ್ತಾರವಾಗಿ ಮಹಿಳಾ ದೃಷ್ಟಿಯಿಂದ ಮಹಿಳೆ ಸಾಗಿ ಬಂದ ದಾರಿಯನ್ನು ಗುರುತಿಸಿಕೊಳ್ಳಬಹುದಾಗಿದೆ ಎನ್ನುತ್ತಾರೆ. ಹೊನ್ನಮ್ಮ, ಮಲ್ಲಮ್ಮ, ಚೆನ್ನಮ್ಮ ಆಗಿ ಮುಖ್ಯವಾಗದೆ ಆಕೆ ಮಗಳಾಗಿ, ಸೊಸೆಯಾಗಿ, ತಾಯಿಯಾಗಿ ಮಾತ್ರ ಮುಖ್ಯವಾಗುತ್ತ ಸಾಗುವ ಬದುಕಿನ ಭಾಗವನ್ನು ಮೌಖಿಕ ಸಾಹಿತ್ಯ ಕಟ್ಟಿಕೊಟ್ಟ ರೀತಿ ಅನನ್ಯ ಹಾಗೂ ನೈಜತೆಯಿಂದ ಕೂಡಿದೆ–ಎಂಬುದನ್ನು ಲೇಖನ ವಿವರಿಸುತ್ತದೆ.

3. ಮೌಖಿಕ ಸಾಹಿತ್ಯದಲ್ಲಿ ಮಹಿಳೆಯರ ಸಿದ್ಧಮಾದರಿಗಳ ಮುರಿಯುವಿಕೆ: ಮೌಖಿಕ ಸಾಹಿತ್ಯದಲ್ಲಿ ಪರಂಪರೆ ಒಂದು ಮಾದರಿಯನ್ನು ರೂಪಿಸುತ್ತಲೇ ಅದನ್ನು ಒಡೆದು ಹಾಕುವ ಕಾರ್ಯತಂತ್ರವೂ ಇರುವುದನ್ನು ಕಾಣಬಹುದು. ಸಮಾಜ ವಿಧಿಸುವ ಮೌಲ್ಯಗಳನ್ನು ಒಪ್ಪಿ ನಡೆಯುವಂತೆ ಒತ್ತಾಯವಿರುವುದನ್ನು ಹೆಚ್ಚಾಗಿ ತ್ರಿಪದಿಗಳಲ್ಲಿ ಕಾಣುತ್ತೇವೆ. ಗೀತೆಗಳು, ಕಥನಗೀತೆಗಳು, ಕತೆಗಳಲ್ಲಿ ಅದರ ಮುರಿಯುವಿಕೆ ಕಾಣುತ್ತೇವೆ. ಹಲವಾರು ನಿದರ್ಶನಗಳ ಮುಖಾಂತರ ಸಂಪ್ರದಾಯ, ನಿಷೇಧಗಳನ್ನು ಮುರಿಯುವ ಸಾಹಿತ್ಯವನ್ನು ಪರಿಚಯಿಸುತ್ತಾರೆ. ಇಲ್ಲೆಲ್ಲಾ ಕಾಣುವುದು ಸ್ತ್ರೀಯ ಬುದ್ಧಿವಂತಿಕೆಯದೇ ವಿಶಿಷ್ಟತೆ. ಆಪತ್ಕಾಲದಲ್ಲಿ ತನ್ನನ್ನು ತಾನೇ ರಕ್ಷಿಸಿಕೊಳ್ಳುವ, ಅಮಾಯಕಳಾಗದೆ ದಿಟ್ಟವಾಗಿ ಮಹಿಳೆ ಮೂಡಿ ಬಂದಿದ್ದಾಳೆ. ಸ್ತ್ರೀ ಶಕ್ತಿಯನ್ನು ತಿಳಿಸುವ ಅನೇಕ ಆಶಯಗಳು 'ಜನಪದಕತೆ'ಗಳಲ್ಲಿ ಸಿಗುತ್ತವೆ. ಸಾಹಸ ಪಾತ್ರಗಳಲ್ಲಿ ಗಂಡು ವ್ಯಕ್ತವಾದರೆ, ಬುದ್ಧಿವಂತಿಕೆ ಜಾಣತನದಲ್ಲಿ ಹೆಣ್ಣು ಕಾಣುತ್ತಾಳೆ. ಅಡುಗೂಲಜ್ಜಿ, ಮಾಟಗಾರ್ತಿ, ನಾಗಕನ್ಯೆ, ರಾಜಕುಮಾರಿ, ಹೆಂಡತಿ, ಮಗಳು, ತಂಗಿಯಂತಹ ಪಾತ್ರಗಳು ನಾಯಕನ ಕೆಲಸಕ್ಕೆ ಸಹಾಯಕಳಾಗಿ, ಸಲಹೆಗಾರ್ತಿಯಾಗಿ, ಗೆಲುವಿಗೆ ಕಾರಣವಾಗುವುವು.

ಮೌಖಿಕ ಸಾಹಿತ್ಯದಲ್ಲಿ ದ್ವಿಪತ್ನಿತ್ವ, ಮಲತಾಯಿ ಸಮಸ್ಯೆ ಬಹಳಷ್ಟು ದಾಖಲಾಗಿದೆ. ಜನರನ್ನು ಈ ಸಮಸ್ಯೆ ಕಾಡಿದ್ದರಿಂದಲೇ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಇದು ಕಂಡುಬರುತ್ತದೆ. ಗಂಗೆ–ಗೌರಿ, ಚಾಮುಂಡಿ–ದೇವೇರಿ ಹೀಗೆ ಹಲವಾರು ಕತೆ, ಕಥನಗೀತೆಗಳಲ್ಲಿ ಮಲತಾಯಿ ಸಮಸ್ಯೆ ಅಭಿವ್ಯಕ್ತಿ ಪಡೆದಿದೆ. 'ಧ್ರುವನ ಕತೆ' ಒಂದು ಮಾದರಿಯಾದರೆ, ಕುಮಾರರಾಮ–ಮಲತಾಯಿ ರತ್ನಾಜಿ ಮತ್ತೊಂದು ಮಾದರಿ.

4. ಮೌಖಿಕ ಸಾಹಿತ್ಯದಲ್ಲಿ ಪ್ರತಿಭಟನೆಯ ಸ್ವರೂಪ: ಮಾತೃಪ್ರಧಾನ ವ್ಯವಸ್ಥೆ ಪಿತೃಪ್ರಧಾನಕ್ಕೆ ಪರಿವರ್ತನೆಯಾಗುವಾಗ ಮಹಿಳೆ ಮೌನವಾಗಿ ಕುಳಿತಿಲ್ಲ. ಪ್ರತಿಭಟನೆ ಕಂಡುಬರುತ್ತದೆ. ಯಾವುದೇ ವ್ಯವಸ್ಥೆ ಪರಿವರ್ತನೆಯಾಗುವಾಗ ಪ್ರತಿಭಟನೆ ಇರುತ್ತದೆ. ಎಂಬುದನ್ನು ತಾಯಿ ಕಣ್ಣು ತೆರೆಯೆ, ಗೀಜಗನಗೂಡು ಮುಂತಾದ ಕೃತಿಗಳಲ್ಲಿ ಗುರುತಿಸುತ್ತಾರೆ.

5. ಜನಪದ ಮಹಾಕಾವ್ಯಗಳಲ್ಲಿ ಮಹಿಳಾ ನೆಲೆ: ಜನಪದ ಮಹಾಕಾವ್ಯಗಳು ಪುರುಷನ ವೀರತ್ವವನ್ನು ವೈಭವೀಕರಿಸುತ್ತಾ, ಮಹಿಳೆಯು ತನ್ನೆಲ್ಲ ಶಕ್ತಿಯನ್ನು ಪುರುಷನಿಗೆ ನೀಡುತ್ತಾ ಎರಡನೆಯ ಸ್ಥಾನಕ್ಕೆ ಬಂದು ನಿಲ್ಲುತ್ತಾಳೆ. ಪುರುಷ ಆಕೆಯ ಶಕ್ತಿಯನ್ನು ಉಪಾಯವಾಗಿ ತನ್ನದಾಗಿಸಿಕೊಳ್ಳುವ ರೀತಿಯನ್ನು 'ಮಲೆಮಾದೇಶ್ವರ ಕಾವ್ಯ'ದಲ್ಲಿ ಬರುವ ಆದಿಶಕ್ತಿ ಹಾಗೂ ಬೇವಿನಕಟ್ಟೆ ಕಾಳಮ್ಮನ ಪಾತ್ರಗಳಲ್ಲಿ ನೋಡಬಹುದು. ಹಾಗೆಯೇ ಮಂಟೆಸ್ವಾಮಿ ಕಾವ್ಯದಲ್ಲಿ, ಮಂಟೆಸ್ವಾಮಿ ಗ್ರಾಮದೇವತೆಗಳನ್ನೆಲ್ಲ ಬಗ್ಗು ಬಡಿದು ಅವರ ಭಕ್ತರನ್ನೆಲ್ಲಾ ತನ್ನ ಭಕ್ತರನ್ನಾಗಿ ಪರಿವರ್ತಿಸಿಕೊಳ್ಳುವುದು. 'ಪಿರಿಯಾಪಟ್ಟಣ ಕಾಳಗ' ಕಾವ್ಯದಲ್ಲಿ ಹೆಣ್ಣುಮಗಳು ಬಡತನದಿಂದ ಬೆಂದು ತಂದೆಯ ರಾಜ್ಯದಲ್ಲಿ ಪಾಲು ಕೇಳಲು ಹೋದಾಗ ಯುದ್ಧವಾಗುವುದು. ಪುರಾಣಕಾವ್ಯಗಳಲ್ಲಿ ಮಾತೃಪ್ರಧಾನ ವ್ಯವಸ್ಥೆ ಪಿತೃಪ್ರಧಾನವಾಗಿ ಮಾರ್ಪಡುವ ಘಟ್ಟದಲ್ಲಿ ಮಹಿಳೆ ಪಡೆದ ಸ್ಥಿತ್ಯಂತರಗಳನ್ನು ತಿಳಿಸುತ್ತದೆ.

6. ಸಾಮಾಜಿಕ ಸ್ತರದಲ್ಲಿ ಪ್ರತಿಭಟನೆಯ ಮಾದರಿ : ಹೆಣ್ಣಿಗೆ ಒದಗುವ ಹಿಂಸೆಯ ರೂಪ ಎರಡು ವಿಧ. 1. ಸಾಮಾಜಿಕ ಸ್ತರದಲ್ಲಿ ಒದಗುವ ಹಿಂಸೆ. 2. ಕುಟುಂಬದೊಳಗಿನ ಹಿಂಸೆ. ಹೆಣ್ಣಿನ ಸಾವಿಗೆ ಸಾಮಾಜಿಕ ಸ್ತರದಲ್ಲಿ ಒಪ್ಪಿಗೆ ಇದೆ. ಏಕೆಂದರೆ ಹಲವಾರು ಮಹಿಳೆಯರ ಸಾವಿನ ಕಾವ್ಯಗಳು ಜನಪದ ಸಾಹಿತ್ಯದಲ್ಲಿವೆ. ಸತಿಯ ರೂಪದಲ್ಲಿ, ಕೋಟೆ ನಿಲ್ಲಲು, ಕೆರೆ ಕಟ್ಟಲು ಆಹಾರವಾಗಿದ್ದಾರೆ. ಲೈಂಗಿಕ ದೌರ್ಜನ್ಯಕ್ಕೆ ಸಿಲುಕಿ ಸಾರ್ವಜನಿಕವಾಗಿ ಬಲಿಯಾಗುವುದು. ಜನಪದ ಸಾಹಿತ್ಯದಲ್ಲಿ ಸಂಘಟಿತ ಹೋರಾಟದ ಸ್ವರೂಪ ಇಲ್ಲವೇ ಇಲ್ಲ. ಇಲ್ಲಿನ ಪ್ರತಿಭಟನೆ ವೈಯಕ್ತಿಕ ಸ್ತರದಲ್ಲಿ ಮಾತ್ರ ಕಂಡುಬರುತ್ತದೆ.

7. ದೂರದರ್ಶನ ಮತ್ತು ಮಹಿಳೆ: ಮಹಿಳೆಯರ ರೂಢಿಗತ ಮಾದರಿಗಳು ಮತ್ತಷ್ಟು ಸ್ಥಿರೀಕರಣಕ್ಕೆ ಒಳಗಾಗುತ್ತಿವೆ. ಮಹಿಳೆಯರ ಸಬಲೀಕರಣಕ್ಕೆ ಒತ್ತಿಲ್ಲ, ದೇಹಸೌಂದರ್ಯವನ್ನು ಮಹಿಳೆಯ ವ್ಯಕ್ತಿತ್ವದ ಮಾನದಂಡವಾಗಿ ಇಟ್ಟುಕೊಂಡು ಕೆಲಸ ಮಾಡುವ ಮಾಧ್ಯಮ ಮುಖ್ಯವಾಗಿ ಏನು ಹೇಳುತ್ತದೆ ಎಂದು ಪ್ರಶ್ನಿಸುತ್ತಾರೆ. ಧಾರಾವಾಹಿಗಳನ್ನು ನೋಡುವವರಲ್ಲಿ ಮಹಿಳೆಯರೇ ಹೆಚ್ಚು. "ಎಲ್ಲವನ್ನು ತ್ಯಾಗ ಮಾಡುತ್ತಾ ಕುಟುಂಬದ ಶ್ರೇಷ್ಠತೆಗಾಗಿ ದುಡಿಯುವ ಪಾತ್ರಗಳನ್ನು ಕೊಡುವುದು ಒಂದು ಕಡೆಯಾದರೆ, ಕುಟುಂಬವನ್ನು ಒಡೆಯುವ ಸ್ತ್ರೀ ಮಾದರಿಗಳು ಇನ್ನೊಂದೆಡೆ.. ದೂರದರ್ಶನ ಲಿಂಗಸಮಾನತೆಯ ಕಡೆಗೆ ಚಿಂತನೆ ಹರಿಸಬೇಕು. ಜನರನ್ನು ಮಂಥನಕ್ಕೊಳಪಡಿಸುವ ಕಾರ್ಯಕ್ರಮಗಳು ಮೂಡಿಬರಬೇಕು. ಎಲ್ಲ ವಿಭಾಗಗಳಲ್ಲೂ ಮಹಿಳಾ ಸಂವೇದನೆ ಕ್ರಿಯಾಶೀಲವಾಗಿ ಕೆಲಸ ಮಾಡಬೇಕಿದೆ. ಆಗ ಮಹಿಳಾ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಜನರೊಂದಿಗೆ ತೆರೆದಿಡಲು ಸಾಧ್ಯವಾಗುತ್ತದೆ", ಎಂಬ ಆಶಯವಿದೆ.

8. ಜಾಹಿರಾತಿನಲ್ಲಿ ಮಹಿಳಾ ಪ್ರಾತಿನಿಧ್ಯ : ಜಾಹಿರಾತುಗಳು ಮಹಿಳೆಯರನ್ನು ಒಳಗುಮಾಡಿಕೊಳ್ಳುತ್ತಿರುವ ರೀತಿ ಪ್ರಶ್ನಿಸುವಂತಿದೆ.

ಬಳಕೆದಾರಳನ್ನಾಗಿ ಮಹಿಳೆಯನ್ನು ಚಿತ್ರಿಸುತ್ತದೆ. ಅವಳ ಶ್ರಮದ ಶಕ್ತಿಯನ್ನು, ಬೌದ್ಧಿಕ ಸಾಮರ್ಥ್ಯವನ್ನು ಮತ್ತು ಉತ್ಪಾದನಾಶಕ್ತಿಯನ್ನು ಗೌಣಗೊಳಿಸುತ್ತವೆ. ಮಹಿಳೆ ಬರೀ ಬಳಕೆದಾರಳಲ್ಲ, ಪುರುಷನ ಜೇಬನ್ನು ಪೂರ್ತಿ ಖಾಲಿಮಾಡುವವಳು ಎಂಬ ಭಾವನೆ ಮೂಡಿಸುವ ಜಾಹಿರಾತುಗಳು ಇವೆ. ಹಾಗೆಯೇ ಇತ್ತೀಚೆಗೆ ಕೆಲವು ಮಹಿಳಾ ಪ್ರಾತಿನಿಧ್ಯದ ಜಾಹಿರಾತುಗಳೂ ಇವೆ. ಮಹಿಳೆ ಎಂದಾಕ್ಷಣ ಬೌದ್ಧಿಕತೆಗಿಂತ ದೈಹಿಕವಾಗಿ ನೋಡುವ ರೂಢಿ, ಸಂಸ್ಕೃತೀಕರಣವಾಗಿ ಹಲವಾರು ಶತಮಾನಗಳಿಂದ ಬೆಳೆದುಬಂದಿರುವ ಈ ರೀತಿಯ ದೃಷ್ಟಿಕೋನ ಜಾಹಿರಾತಿನಲ್ಲಿ ಮತ್ತಷ್ಟು ಅಪಾಯದ ಕಡೆ ಸಾಗಿದೆ.

9. ಸೌಂದರ್ಯ ಸ್ಪರ್ಧೆ: ಸ್ತ್ರೀಯನ್ನು ಹಿಂದಿನಿಂದಲೂ ಭೋಗ ಮತ್ತು ಸಂತಾನೋತ್ಪತ್ತಿಗೆ ಸೀಮಿತಗೊಳಿಸಿ ನೋಡುವುದು. ಇದನ್ನು ಮುಂದುವರೆಸುವಂತೆ ವಿಶ್ವಸುಂದರಿಯ ಆಯ್ಕೆಯಾಗುತ್ತದೆ. ಒಂದಾಣೆ ಕೂಲಿ ಪಡೆದು ವನ ಬೆಳೆಸಲು ತಮ್ಮ ಜೀವನವನ್ನು ಅರ್ಪಿಸಿಕೊಂಡ ತುಳಸಿ, 2000ಕ್ಕೂ ಹೆಚ್ಚು ಹೆರಿಗೆ ಮಾಡಿಸಿದ ಜಲ್ಲೆಸಿದ್ಧಮ್ಮನಂತಹವರ ಬದುಕಿನ ಹೋರಾಟದ ಸೌಂದರ್ಯದ ಸೊಗಡನ್ನು ಅರ್ಥಮಾಡಿಕೊಳ್ಳುವ ಹೃದಯವಂತಿಕೆ ಬೆಳೆಸಬೇಕಿದೆ. ನೈಜ ಸೌಂದರ್ಯ ಎಂದೂ ಬಂಡವಾಳಶಾಹಿಗಳ ಹಿಡಿತದಲ್ಲಿಲ್ಲ. ಸೌಂದರ್ಯ ಸ್ಪರ್ಧೆಯಲ್ಲಿ ಒಬ್ಬಾಕೆ ಗಳಿಸುವ ಹಣ, ಶ್ರೀಮಂತಿಕೆಯಿಂದ ಯಾವ ಹೆಣ್ಣುಮಕ್ಕಳಿಗೂ ಜ್ಞಾನ, ಅರಿವನ್ನು ವಿಸ್ತರಿಸಲು ಸಾಧ್ಯವಿಲ್ಲ.

10. ಚಲನಚಿತ್ರ ಮಾಧ್ಯಮ ಮತ್ತು ಮಹಿಳೆ : ಜನಪ್ರಿಯ ಮಾಧ್ಯಮಗಳ ಮುಖ್ಯ ಉದ್ದೇಶ ಹಣ ಮಾಡುವುದು, ಅದಕ್ಕಾಗಿ ಜನರನ್ನು ರಂಜಿಸುವುದು, ಬೆಡಗಿನ ಭ್ರಮಾಲೋಕದ ಸೃಷ್ಟಿ.

11. ಮಾತೃಪ್ರಧಾನತೆ, ಮಾತೃವಂಶೀಯ ಮತ್ತು ಮಾತೃಸ್ಥಳೀಯ ಕುಟುಂಬ ವ್ಯವಸ್ಥೆ : ಬುಡಕಟ್ಟು ಜನಾಂಗಗಳಲ್ಲಿ ಮಾತೃಪ್ರಧಾನ ಕುಟುಂಬ ಪದ್ಧತಿ ಇದೆ. ಮಾತೃಪ್ರಧಾನ ಕುಟುಂಬಗಳಲ್ಲಿ ವಂಶದ ಮುಂದುವರಿಕೆ ಸ್ತ್ರೀಯರ ಮೂಲಕವೇ ಸಾಗುವುದು. ಕನ್ನಡ ಜನಪದ ಕಾವ್ಯದಲ್ಲಿ ಇದಕ್ಕೆ ಸ್ಪಷ್ಟ ಕುರುಹುಗಳಿವೆ. ಇದನ್ನು ಹಲವಾರು ಉದಾಹರಣೆಗಳ ಮುಖಾಂತರ ಸ್ಪಷ್ಟೀಕರಿಸಿದ್ದಾರೆ.

12. ಸಂಪ್ರದಾಯ–ಆಚರಣೆ–ನಂಬಿಕೆ–ಮಹಿಳೆ: ಆಚರಣೆ ನಂಬಿಕೆಗಳ ಮೊತ್ತವೇ ಸಂಪ್ರದಾಯ. ಹೆಣ್ಣಿನ ಬಗ್ಗೆ ಇರುವ ನಂಬಿಕೆಗಳು ಆಕೆಯನ್ನು ಆಚರಣೆಗಳಲ್ಲಿ ತೊಡಗುವಂತೆ ಪ್ರೋತ್ಸಾಹಿಸುತ್ತವೆ. ಪಿತೃಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಸ್ಥಾನ ನಿರ್ಣಯ ಪುರುಷನ ಮೂಲಕವೇ. ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ಉಳಿದು ಬೆಳೆದು ಬಂದಿರುವ ನಂಬಿಕೆ ಹಲವಾರು ಹಬ್ಬ, ವ್ರತಗಳ ಹಿಂದೆ ಕೆಲಸ ಮಾಡಿವೆ. ಭೂಮಿ, ಗಂಗೆ ಮುಂತಾದವನ್ನು ಹೆಣ್ಣು ಎಂದು ಗುರುತಿಸಿದೆಯಾದರೂ ಅದರ ಒಡೆತನ ಪುರುಷನದಾಗಿದೆ. ದೇವದಾಸಿ ಪದ್ಧತಿ, ವರಮಹಾಲಕ್ಷ್ಮಿ, ಮಂಗಳಗೌರಿ, ಭೀಮನಮಾವಾಸ್ಯೆ–ಹೀಗೆ ಹೆಸರಿಸಬಹುದು. ಮುತ್ತೈದೆತನಕ್ಕೆ ಹಂಬಲ, ಪುರುಷನ ಒಳಿತನ್ನು ಕೋರುವ ಆಚರಣೆಗಳಿವೆ.

13. ಹೊನ್ನಮ್ಮನ ಹದಿಬದೆಯ ಧರ್ಮ: 15–16ನೇ ಶತಮಾನದಲ್ಲಿ ದಾಸರು, ಸಂತಕವಿಗಳು, ಸರ್ವಜ್ಞ ಮುಂತಾದವರು ಪತಿವ್ರತಾಧರ್ಮಕ್ಕೆ ಹೆಚ್ಚು ಒತ್ತು ಕೊಟ್ಟಿರುವಂತೆ ಕಾಣುತ್ತದೆ. ವೈದಿಕಧರ್ಮ ಬಿಟ್ಟು ಉಳಿದವರಲ್ಲಿ ಹೆಣ್ಣಿಗೆ ವಿಧವಾ ಆಚರಣೆ ಇರಲಿಲ್ಲ, ಮರುವಿವಾಹಕ್ಕೆ ಅವಕಾಶವಿತ್ತು, ಶೀಲ ಹೆಣ್ಣಿನ ಶ್ರೇಷ್ಠತೆಯ ಪ್ರಶ್ನೆಯಾಗಿರಲಿಲ್ಲ. ಈ ಮೌಲ್ಯವನ್ನು ಪರಿಚಯಿಸಲು ಹೊನ್ನಮ್ಮನಿಂದ 'ಹದಿಬದೆಯ ಧರ್ಮ' ಬರೆಸಿದಂತಿದೆ. 'ಸಾಮರಸ್ಯ' ಮಾತ್ರ ಹೆಣ್ಣಿನ ಶಕ್ತಿಯ ನೆಲೆ ಎಂದಿದ್ದಾರೆ.

14. ದುಡಿವ ಮಹಿಳೆ ಮತ್ತು ಸಾಂಪ್ರದಾಯಿಕತೆ: ಹಳೆಯ ರೀತಿಯ ಪ್ರತೀಕಗಳೇ ಹೊಸ ರೀತಿಯ ಉದ್ಯೋಗದಲ್ಲೂ ಪುನರಾವರ್ತನೆ ಆಗಿವೆ. ಸಮಾಜ ತನ್ನ ಆಲೋಚನಾ ಕ್ರಮವನ್ನೇ ಬದಲಿಸಿಕೊಳ್ಳಬೇಕಿದೆ. ಶಾಲಾ ಉಪಾಧ್ಯಾಯಿನಿ, ಗುಮಾಸ್ತೆ, ಸ್ಟೆನೋ, ದಾದಿ, ರಿಸೆಪ್ಷನಿಸ್ಟ್, ಸೇಲ್ಸ್‌ಗರ್ಲ್, ಗಗನಸಖಿ–ಹೀಗೆ ಉತ್ಪಾದನೆ ಮತ್ತು ಉನ್ನತ ಬೌದ್ಧಿಕ ಕ್ಷೇತ್ರಗಳು ಪುರುಷನ ಹಿಡಿತಲ್ಲಿಯೇ ಉಳಿದು ಆಕೆ ಆತನ ಪೂರಕ ಕೆಲಸಗಾರ್ತಿ ಆಗಿರುವುದೇ ಹೆಚ್ಚು. ವ್ಯವಸ್ಥಿತ ರೀತಿಯಲ್ಲಿ ಮಹಿಳೆಯ ಶ್ರಮವನ್ನು ಕಡಿಮೆ ಹಣಕ್ಕೆ ಪಡೆಯುವಲ್ಲಿ ಸಮಾಜ ಸಫಲವಾಗಿದೆ. ದೇಹಸೌಂದರ್ಯವನ್ನೂ ಬಂಡವಾಳವಾಗಿಯೇ ಬಳಸಲಾಗುತ್ತಿದೆ. ಬೌದ್ಧಿಕ ಉನ್ನತಿಯತ್ತ ಮಹಿಳೆ ಸಾಗಿದಾಗ ಮಾತ್ರವೇ ಆಕೆ ಲಿಂಗತಾರತಮ್ಯವನ್ನು ಕಡಿಮೆ ಮಾಡಿಕೊಳ್ಳಲು ಸಾಧ್ಯ.

'ಸಂಸ್ಕೃತಿ' ಎಂದರೆ 'ಮಾನವಜ್ಞಾನ, ನಂಬಿಕೆ ಹಾಗೂ ವರ್ತನೆಗಳ ಸಮಗ್ರ ರೂಪುರೇಷೆ'. ಮಹಿಳಾ ನೆಲೆಯಿಂದ ಸಂಸ್ಕೃತಿ ಶೋಧದಲ್ಲಿ ನಿರತರಾಗಿರುವ ಡಾ॥ ಸುನಂದಮ್ಮನವರ ಈ ಎಲ್ಲ ಮೇಲ್ಕಂಡ ಲೇಖನಗಳು ಈ ದಿಕ್ಕಿನಲ್ಲಿ ಚಿಂತನೆ ನಡೆಸಿ ಹಲವಾರು 'ಒಳನೋಟ'ಗಳನ್ನು ಹರಿಸಿವೆ. ಮಹಿಳಾ ಸಾಹಿತ್ಯ ಪರಂಪರೆಗೆ ಈ ಎರಡು ಕೃತಿಗಳು ತಮ್ಮದೇ ಆದ ಮಹತ್ವದ ಕೊಡುಗೆಯಾಗಿ, ಅಧ್ಯಯನ ಯೋಗ್ಯ ಕೃತಿಗಳೆನಿಸಿವೆ.

❑

ಬದಲಾದ ಬಯಕೆಗಳು




ನಾನೀಗ ಬಯಸಲಾರೆ
ಕಾಮನಬಿಲ್ಲಿನ ಬಣ್ಣಗಳ
ಬಯಸಲಾರೆ ಇನ್ನು
ರವಿಯ ತುಂಟ ನಗೆ
ದಿಗಂತದಲ್ಲಿ ತೇಲುವ
ಬೆಳ್ಳಂಚಿನ ಮೋಡಗಳ;
ನನ್ನ ಜೀವನದ ಸಂಜೆಯಲ್ಲಿ

ನಾ ಬಯಸುವುದು
ಮುಸ್ಸಂಜೆಯ ಮಂದ ಬೆಳಕು
ಚಂದಿರನ ಮಂದಹಾಸ
ಚುಕ್ಕೆಗಳ ಮುಗುಳ್ನಗೆ
ಓಂಕಾರದ ಶಕ್ತಿ
ನಿರಂತರ ಭಕ್ತಿ

–ಶೋಭಾ ಕುಲಕರ್ಣಿ

ಮನುಷ್ಯರಂತೆ ಬಾಳಲು ಅಥವಾ ಸಾಯಲು ಅದು ಬಿಡುತ್ತಿಲ್ಲ



ಪರಮಾಣು ಶಸ್ತ್ರ ಸ್ಫೋಟದಲ್ಲಿ ಬದುಕುಳಿದ ಮಹಿಳೆಯ ಸಾಕ್ಷಿ.
ತೆರೂಕೊ ಯೊಕೊಯಾಮಾ, ಜಪಾನ್

ಇಲ್ಲ
ಸಾವಿನೆಡೆಗೆ ನಾ
ನಗುವುದಿಲ್ಲ
ಗಿಡ ಗೆಂಟೆ, ಹಕ್ಕಿ ಪಕ್ಷಿಗಳೊಂದಿಗೆ
ಸಾಯಲು ಹೆದರಿದ್ದೇನೆ
ಅಂತೇನೂ ಅಲ್ಲ
-ಜವೀರ್ ಹೆರೌದ್, *ಲೈಮಾ*

ನನ್ನ ಹೆಸರು ತೆರೂಕೊ ಯೊಕೊಯಾಮಾ. ಜಪಾನ್ ದೇಶದಿಂದ ಬಂದಿದೇನೆ; 9 ಆಗಸ್ಟ್ 1945ರಂದು ನಾಗಾಸಾಕಿ ನಗರದ ಮೇಲೆ ನಡೆದ ಪರಮಾಣು ಬಾಂಬ್ ದಾಳಿಯಲ್ಲಿ ಬದುಕುಳಿದ ಮಹಿಳೆ ನಾನು. ಜಪಾನ್ ಪರಮಾಣು ಬಾಂಬ್ ಮತ್ತು ಹೈಡ್ರೋಜನ್ ಬಾಂಬ್‌ನಿಂದ ನೊಂದವರ ಒಕ್ಕೂಟವನ್ನು ಪ್ರತಿನಿಧಿಸುತ್ತಿದ್ದೇನೆ.

ಶಾಂತಿಗಾಗಿ ಯುದ್ಧ ವಿರೋಧಿ ಮಹಿಳಾ ನ್ಯಾಯಾಲಯಕ್ಕೆ ನನ್ನನ್ನು ಕರೆದುದಕ್ಕೆ ಮತ್ತು ಪರಮಾಣು ಶಸ್ತ್ರಗಳ ವಿರುದ್ಧ ಸಾಕ್ಷಿ ಹೇಳಬೇಕೆಂದು, ಪರಮಾಣು ಶಸ್ತ್ರಗಳಿಂದ ಮುಕ್ತವಾಗಿರುವ ದ.ಆಫ್ರಿಕಾಗೆ ಆಹ್ವಾನಿಸಿದ್ದಕ್ಕಾಗಿ ಕೃತಜ್ಞತೆಗಳು. ದ.ಆಫ್ರಿಕ ಹಿಂದೆ ಒಂದುಸಲ ಪರಮಾಣು ಶಸ್ತ್ರ ಅಭಿವೃದ್ಧಿ ಪಡಿಸಿತ್ತೆಂದು, ಆ ನಂತರ ಅವುಗಳನ್ನ ಬಿಚ್ಚಿ ನಿಷೇಧಿಸಿತೆಂದು ಕೇಳಿದ್ದೇನೆ. ಈಗ ದಕ್ಷಿಣ ಆಫ್ರಿಕ ದೇಶ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಮಾಣು ಶಸ್ತ್ರಗಳ ನಿಷೇಧಕ್ಕಾಗಿ ಉಳಿದ 7 ಪರಮಾಣುಮುಕ್ತ ದೇಶಗಳ ಜೊತೆಗೂಡಿ ಕಾರ್ಯಕ್ರಮ ರೂಪಿಸುತ್ತಿದೆ. ರಾಜಕೀಯ ಇಚ್ಛಾಶಕ್ತಿಯಿದ್ದರೆ, ಪರಮಾಣು ಶಸ್ತ್ರಗಳ ನಿಷೇಧ ಸಾಧ್ಯ. ನಿಮ್ಮ ದೇಶ ಅದನ್ನ ರುಜುವಾತುಪಡಿಸಿದೆ. ಜಪಾನಿನಲ್ಲಿ ಪರಮಾಣು ಬಾಂಬ್ ದಾಳಿಯಿಂದ ಗಾಯಗೊಂಡು ಬದುಕುಳಿದವರನ್ನು 'ಹಿಬಾಕುಷ' ಎಂಬ ಹೆಸರಿನಿಂದ ಕರೆಯುತ್ತಾರೆ. ಹಿರೋಷಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಪರಮಾಣು ಮತ್ತು ಹೈಡ್ರೋಜನ್ ಬಾಂಬ್‌ಗಳನ್ನು ಸಿಡಿಸಿದ ನಂತರ ನಾವು ಹತಾಶೆಯಿಂದ ಹೊರಬರಲು 11 ವರ್ಷ ಬೇಕಾಯಿತು. ಜಪಾನ್ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿ ಪರಮಾಣು ಬಾಂಬ್‌ಗಳ ವಿರುದ್ಧ ರೂಪುಗೊಳ್ಳುತ್ತಿರುವ ಜನಾಭಿಪ್ರಾಯದಂತೆ ನಾವು 1956ರಲ್ಲಿ ಈ ಸಂಘಟನೆ ಕಟ್ಟಿದೆವು. ಅಂದಿನ ತನಕ ಹಿಬಾಕುಷಗಳು ಸಮಾಜದಿಂದ ದೂರವಾಗಿ ಏಕಾಂತ ಜೀವನ ನಡೆಸುತ್ತಿದ್ದರು. ಪರಮಾಣು ಬಾಂಬ್ ಸಿಡಿತದಿಂದ ಸುಟ್ಟ ಗಾಯಗಳನ್ನು ವಾಸಿಮಾಡಲು ಬೇಕಾಗುವ ಔಷಧಿ ಮತ್ತು ಪರಮಾಣು ವಿಕಿರಣ ಪರಿಣಾಮದಿಂದ ಚೇತರಿಸಿಕೊಳ್ಳಲು ನಾವು ತುಂಬಾ ಹೋರಾಡಬೇಕಾಯಿತು.

ಮದುವೆ ಸಮಯದಲ್ಲಿ, ಮಕ್ಕಳ ವಿಷಯದಲ್ಲಿ, ಉದ್ಯೋಗ ಗಳಿಸುವಲ್ಲಿ ನಮ್ಮ ಬಗ್ಗೆ ತಾರತಮ್ಯ ತೋರಲಾಗುತ್ತಿತ್ತು. ಹಿಬಾಕುಷಗಳ ದುರ್ಬಲ ಆರೋಗ್ಯದ ದೆಸೆಯಿಂದ ಯಾರೂ ಅವರನ್ನು ಕೆಲಸಕ್ಕೆ ನೇಮಿಸಿಕೊಳ್ಳಲು ಇಷ್ಟ ಪಡುತ್ತಿರಲಿಲ್ಲ. ಜೈವಿಕ ಪರಿಣಾಮಗಳು ಉಂಟಾಗಬಹುದೆಂಬ ಹೆದರಿಕೆಯಿಂದ ಯಾರೂ ಅವರೊಂದಿಗೆ ಮದುವೆ ಸಂಬಂಧ ಬೆಳೆಸುವ ಧೈರ್ಯ ಮಾಡುತ್ತಿರಲಿಲ್ಲ. ಈ ಅವಧಿಯಲ್ಲಿ ಪರಮಾಣು ಮತ್ತು ಜಲಜನಕ ಬಾಂಬ್‌ಗಳಿಂದ ಉಂಟಾದ ಹಾನಿ ಮತ್ತು ಪರಿಣಾಮಗಳ ಬಗ್ಗೆ ಮಾತನಾಡುವುದು ಮತ್ತು ಬರೆಯುವುದನ್ನು ಆಗ ಜಪಾನನ್ನು ಕೂಡಾ ಆಕ್ರಮಿಸಿಕೊಂಡಿದ್ದ ಅಮೆರಿಕಾ ಪ್ರೆಸ್‌ಕೋಡ್ ನಿಷೇಧಿಸಿತ್ತು.

ಆದರೆ ಈ ಸಂಘಟನೆ ಸ್ಥಾಪಿಸಿದಾಗಿನಿಂದಲೂ ನಾವು ಹಿಬಾಕುಷಗಳು ಪರಮಾಣು-ಜಲಜನಕ ಬಾಂಬ್‌ಗಳು ಮಾಡಿದ ಹಾನಿ ಮತ್ತು ಸಾವು ನೋವುಗಳ ಬಗ್ಗೆ ತುಂಬಾ ಮುಕ್ತವಾಗಿ ಮಾತನಾಡಿದ್ದೇವೆ. ನಾವು ಅನುಭವಿಸಿದ ಯಾತನೆ, ಸಂಕಟವನ್ನು ಬೇರೆ ಯಾರೂ ಅನುಭವಿಸಬಾರದು, ಪರಮಾಣು ಶಸ್ತ್ರಗಳನ್ನ ಸಂಪೂರ್ಣ ನಿಷೇಧಿಸಬೇಕೆಂದು ನಾವು ಜಗತ್ತಿಗೆ ವಿನಂತಿಮಾಡಿಕೊಂಡಿದ್ದೇವೆ. 1945ರ ಆಗಸ್ಟ್ 6 ಮತ್ತು 9ರಂದು ಕೇವಲ ಎರಡು ಪರಮಾಣು ಬಾಂಬ್‌ಗಳು ತಮ್ಮ ಅಗಾಧ ಶಾಖ ಮತ್ತು ಸಿಡಿತಗಳಿಂದ ಕ್ಷಣಮಾತ್ರದಲ್ಲಿ ಹಿರೋಷಿಮಾ, ನಾಗಾಸಾಕಿ ನಗರಗಳು ಸುಟ್ಟುಹೋದ ಮನುಷ್ಯ ದೇಹಗಳ ರಾಶಿ, ದೇಹದಿಂದ ಹೊರಬಂದ ಕಣ್ಣು ಮತ್ತು ಇತರ ಅಂಗಾಂಗಗಳು, ಪ್ರಯಾಣಿಕರೊಂದಿಗೆ ಸುಟ್ಟು ಕರಕಲಾದ ಕಾರುಗಳಿಂದ ತುಂಬಿ ಹೋಗಿದ್ದವು. ಉದುರಿಬಿದ್ದ ಮನೆಗಳ ಕೆಳಗೆ ಸಿಕ್ಕಿಕೊಂಡರು. ದೆವ್ವಗಳಂತೆ ಕಾಣುತ್ತಿದ್ದ ಸಾಲು ಸಾಲು ಜನ ನಗರಗಳ ಹೊರಗೆ ವಾಸಿಸತೊಡಗಿದರು. ಕೂದಲುಗಳು ಸುಟ್ಟುಹೋದವು. ಕೈಗಳ ಚರ್ಮ ಸುಲಿದು ಬೆರಳ ತುದಿಗಳಲ್ಲಿ ನೇತಾಡುತ್ತಿತ್ತು. ಹಿಬಾಕುಷಗಳು ಕಂಡ ಈ ಭಯಾನಕ ದುರಂತ ದೃಶ್ಯಗಳು ಭೂಮಿಯ ಮೇಲಿನ ನರಕದಂತಿದ್ದವು.

ಕೆಲ ದಿವಸಗಳಲ್ಲಿ, ತಕ್ಷಣದ ಸಾವಿನಿಂದ ತಪ್ಪಿಸಿಕೊಂಡವರು, ತಮ್ಮ ಕುಟುಂಬಗಳನ್ನು ಹುಡುಕುತ್ತ ಬಂದವರು ಅಥವಾ ಪರಿಹಾರ ಕಾರ್ಯಗಳಿಗಾಗಿ ಬಂದವರು ವಿಕಿರಣ ಪರಿಣಾಮದಿಂದ ಒಬ್ಬರ ನಂತರ ಒಬ್ಬರು ನೆಲಕ್ಕುರುಳಿದರು; ಅವರ ಕೂದಲುಗಳು ಉದುರಿದವು, ರಕ್ತ ಕಾರಿಕೊಂಡರು.

ನನ್ನ ತಂದೆ ಮಾಧ್ಯಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು.

ಪರಮಾಣು ಬಾಂಬ್ ಸಿಡಿದ ಕೇಂದ್ರ ಸ್ಥಳದಿಂದ 1.2 ಕಿ.ಮೀ ದೂರದ ತರಗತಿಯಲ್ಲಿದ್ದರು. ಅಗಾಧ ಸಿಡಿತದಿಂದ ಅವರು ಶಾಲೆಯ ಆವರಣದಿಂದ ಬೆಟ್ಟದ ಬುಡಕ್ಕೆ ಎಸೆಯಲ್ಪಟ್ಟಿದ್ದರು. ಪ್ರಜ್ಞಾಹೀನರಾಗಿ ಮೂರು ದಿವಸಗಳ ಕಾಲ ಅಲ್ಲೇ ಬಿದ್ದಿದ್ದರು. ನಂತರ ಅವರನ್ನು ಯಾರೋ ಅಲ್ಲಿಂದ ರಕ್ಷಿಸಿದರು. ನನ್ನ ತಾಯಿ, ನಾನು ಮತ್ತು ನನ್ನ ಪುಟ್ಟತಂಗಿ ಪರಮಾಣು ಬಾಂಬ್ ಸ್ಫೋಟಿಸಿದ ಕೇಂದ್ರ ಸ್ಥಳದಿಂದ 4 ಕಿ.ಮೀ ದೂರದಲ್ಲಿನ ನಮ್ಮ ಮನೆಯ ಅಂಗಳದಲ್ಲಿದ್ದೆವು. ಮನೆಯ ಒಳಗೆ ಕಪಾಟಿನ ಅನೇಕ ಪೆಟ್ಟಿಗೆಗಳು ಕೆಳಗೆ ಬಿದ್ದವು, ಕಿಟಕಿಯ ಚೂರುಗಳು ನೆಲದಮೇಲಿದ್ದ ಹುಲ್ಲಿನ ಚಾಪೆಗಳಿಗೆ ಚುಚ್ಚಿಕೊಂಡಿದ್ದವು. ಸಂಜೆಯಾದರೂ ತಂದೆ ಮರಳಿ ಬರಲಿಲ್ಲ. ತಂದೆ ಇದ್ದ ಸ್ಥಳದ ಕಡೆಗೆ ನನ್ನ ತಾಯಿ ನೋಡುತ್ತಿದ್ದರು. ಆಕಾಶಕ್ಕೆ ಭುಗಿಲೇಳುತ್ತಿದ್ದ ಬೆಂಕಿ, ಸಮುದ್ರ ಬಿಟ್ಟು ಬೇರೇನೂ ಕಾಣುತ್ತಿರಲಿಲ್ಲ.

ತಂದೆಯನ್ನು ಗಂಭೀರ ಗಾಯಗಳೊಂದಿಗೆ ಮನೆಗೆ ತರಲಾಯಿತು. ಅವರ ಮುಖ ಸುಟ್ಟ ಗಾಯಗಳಿಂದ ಬಲೂನಿನಂತೆ ಊದಿಕೊಂಡಿತ್ತು. ಕಣ್ಣುಗುಡ್ಡೆಗಳು ಊದಿಕೊಂಡು ಅವರ ಕಣ್ಣಿನ ನೋಟವನ್ನೇ ಮುಚ್ಚಿ ಬಿಟ್ಟಿತ್ತು. ತುಟಿಗಳು ಬಿರಿದು ರಕ್ತ ಸೋರುತ್ತಿತ್ತು. ಮನುಷ್ಯ ಜೀವಿಯಂತೆ ಕಾಣುತ್ತಿರಲಿಲ್ಲ. ಅವರು ಬದುಕಿ ಉಳಿದದ್ದೇ ಅದೃಷ್ಟ ಆದರೆ ಬಲಗಣ್ಣಿನ ದೃಷ್ಟಿ ಹಾಳಾಗಿತ್ತು. ಅಂದಿನಿಂದ ಅವರು ಆಗಾಗ ಆಯಾಸದಿಂದ ಬಳಲಿ, ಅನೇಕ ಸಲ ಆಸ್ಪತ್ರೆ ಸೇರಬೇಕಾಯಿತು. ಯಕೃತ್ತು ಮತ್ತು ಥೈರಾಯಿಡ್ ಸಮಸ್ಯೆ ಅವರನ್ನು ಬಾಧಿಸುತ್ತಿತ್ತು. 1975ರಲ್ಲಿ ತಮ್ಮ 72ನೇ ವಯಸ್ಸಿನಲ್ಲಿ ತೀರಿಕೊಂಡರು. ಬಾಂಬ್ ಸಿಡಿದ ದಿವಸ ನನ್ನ ಪುಟ್ಟ ತಂಗಿ 1 ವರ್ಷ 4 ತಿಂಗಳ ಮಗು. ಒಂದು ತಿಂಗಳ ನಂತರ ಅವಳ ಗಂಟಲಿನ ಸಮಸ್ಯೆ ಪ್ರಾರಂಭವಾಯಿತು. ಅವಳ ಉಸಿರು ಉಗ್ಗುತ್ತಿತ್ತು, ಗಾಳಿಗಾಗಿ ತವಕಿಸುತ್ತಿದ್ದಳು. ಅವಳಿಗೆ ಶಸ್ತ್ರ ಚಿಕಿತ್ಸೆ ನಡೆಯಿತು, ಆದರೆ ಧ್ವನಿ ವಯಸ್ಸಾದ ಅಜ್ಜಿಯ ಧ್ವನಿಯಂತೆ ಗೊಗ್ಗರು ಧ್ವನಿಯಾಯಿತು. ಅನೇಕ ರೋಗ ರುಜಿನಗಳಿಂದ ತನ್ನ ಜೀವಿತದ ಬಹುಪಾಲು ಕಾಲವನ್ನು ಆಸ್ಪತ್ರೆಯಲ್ಲೇ ಕಳೆದಳು. ಶಿಕ್ಷಣ ಪಡೆಯಲು ಸಾಧ್ಯವಾಗಲೇ ಇಲ್ಲ. ಆಸ್ಪತ್ರೆ ಜೀವನದಲ್ಲಿ ಅವಳಿಗೆ ಸಿಕ್ಕಿದ ಒಂದೇ ಸಂತೋಷ ಕರಕುಶಲ ಕಲೆ ಮತ್ತು ಪುಸ್ತಕಗಳು.

40ನೇ ವಯಸ್ಸಿನಲ್ಲಿ ಅವಳ ಪರಿಸ್ಥಿತಿ ಬಿಗಡಾಯಿಸಿತು. ನಿತ್ರಾಣ ದಿಂದ ಹಾಸಿಗೆ ಹಿಡಿದಳು. ಎರಡೂ ಕಣ್ಣುಗಳ ದೃಷ್ಟಿ ಕಳೆದುಕೊಂಡು, ತನ್ನ 44ನೇ ವಯಸ್ಸಿನಲ್ಲಿ ತೀರಿಕೊಂಡಳು. ತಂಗಿ ನೆನಪಾದಾಗ, ಅವಳು ಯಾಕಾಗಿ ಹುಟ್ಟಿದಳು ಅನಿಸಿ ಸಹಿಸಲಸಾಧ್ಯ ದುಃಖ, ಸಿಟ್ಟು ಒತ್ತರಿಸಿ ಬರುತ್ತದೆ. ಪರಮಾಣು ಬಾಂಬ್ ಸಿಡಿಯದಿದ್ದರೆ ಅವಳ ಜೀವನ ಎಷ್ಟೊಂದು ಚೆನ್ನಾಗಿರುತ್ತಿತ್ತು!

ಅನೇಕ ವರ್ಷಗಳ ಕಾಲ ತಂದೆ ಮತ್ತು ತಂಗಿಯನ್ನು ಪಾಲಿಸಿದ ನನ್ನ ತಾಯಿ 1972ರಲ್ಲಿ, 64ನೇ ವಯಸ್ಸಿನಲ್ಲಿ ಹೊಟ್ಟೆ ಕ್ಯಾನ್ಸರ್‌ನಿಂದ ತೀರಿಕೊಂಡರು. 1945ರಲ್ಲಿ ಪರಮಾಣು ಬಾಂಬ್ ಸಿಡಿದಾಗ ನನಗೆ 4 ವರ್ಷ. ನಗರದ ಹೊರ ಪ್ರದೇಶದಲ್ಲಿ ವಾಸ ಕಲ್ಪಿಸಲಾಗಿತ್ತು. ಬಾಂಬ್ ಸಿಡಿಸಿದ 9ನೇ ದಿನ ಅಜ್ಜಿ ನನ್ನನ್ನು ಕರೆದುಕೊಂಡು ನಾಗಾಸಾಕಿ ನಗರಕ್ಕೆ ಬಂದಳು. ಪರಮಾಣು ಬಾಂಬಿನ ವಿಕಿರಣ ಹರಡಿಕೊಂಡಿತ್ತು. ಹುಟ್ಟಿ ಬೆಳೆದ ನಾಗಾಸಾಕಿ ನಗರ ಪ್ರವೇಶಿಸಿದಾಗ ನನಗೆ ಉಂಟಾದ ಗಾಬರಿಯನ್ನು ಎಂದೂ ಮರೆಯಲಾಗುವುದಿಲ್ಲ. ಎಲ್ಲವೂ ನಾಶವಾಗಿ ಸಾವು ಮತ್ತು ಭಯದ ನಗರವಾಗಿತ್ತು. ಅಂದಿನಿಂದ ನಾನು ನಿಶ್ಶಕ್ತತೆಯ ಸಮಸ್ಯೆ ಎದುರಿಸುತ್ತಿದ್ದೇನೆ.

ಬಡವರು ಮತ್ತು ದುರ್ಬಲರ ಮೇಲೆ ಪರಮಾಣು ಬಾಂಬ್ ಇನ್ನಿಲ್ಲದಂತಹ ಕೆಟ್ಟ ಪರಿಣಾಮ ಉಂಟುಮಾಡಿತ್ತು. 1945ರ ಕೊನೆ ವೇಳೆಗೆ ಹಿರೋಷಿಮಾದಲ್ಲಿ 140,000 ಜನ, ನಾಗಾಸಾಕಿ ನಗರದಲ್ಲಿ 70,000 ಜನ ಮರಣ ಹೊಂದಿದರು. ಮರಣ ಹೊಂದಿದವರ ಪೈಕಿ ನೂರಕ್ಕೆ ಅರವತ್ತೈದು ಜನ ದೊಡ್ಡವರು, ಮಕ್ಕಳು ಮತ್ತು ಹೆಂಗಸರು – ಎಲ್ಲರೂ ನಾಗರೀಕ ಸಮಾಜದ ಜನ.

ಕೆಲವು ಹಿಬಾಕುಷ ಸ್ನೇಹಿತರ ಅನುಭವಗಳನ್ನ ಹೇಳಬೇಕು.

ಸಕೂಯೆಷಿಮೋಹಿರಾ, 10 ವರ್ಷದ ಬಾಲಕಿ. ಬಾಂಬ್ ಸಿಡಿದಾಗ ತನ್ನ ಪುಟ್ಟ ತಂಗಿಯೊಂದಿಗೆ ಒಳಗಿದ್ದಳು; ಅದು ಸ್ಫೋಟಕ ಕೇಂದ್ರದಿಂದ 800 ಮೀಟರ್ ದೂರದಲ್ಲಿತ್ತು. ಮನೆಯಲ್ಲಿ ತಾನು ಮತ್ತು ತಂಗಿ ಜೀವಂತ ಪೂರ್ತಿ ಸುಟ್ಟು ಹೋಗಿರುವುದನ್ನು ಕಂಡಳು. ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಹಿರಿಯ ಅಣ್ಣ ಅವರನ್ನು ಕಾಣಲು ನಗರದ ಹೊರಭಾಗದಿಂದ ಬಂದ. ಕೆಲವು ದಿವಸಗಳ ನಂತರ, ಯಾವುದೇ ಸುಟ್ಟ ಗಾಯವಿಲ್ಲದ ಅವನು, 'ನನಗೆ ಸಾಯಲು ಇಷ್ಟವಿಲ್ಲ, ನಾನು ಸಾಯಬಾರದು,' ಎಂದು ಗೊಣಗುತ್ತ ಕಣ್ಮುಚ್ಚಿಬಿಟ್ಟ. ಅಣುವಿಕಿರಣದ ಕಾಯಿಲೆಗೆ ಅವನೂ ಬಲಿಯಾಗಿದ್ದ. ಸಕಯೇ ಮತ್ತು ತಂಗಿ ಬದುಕಿ ಉಳಿಯಲು ತುಂಬಾ ಕಷ್ಟಪಟ್ಟರು; ಪರಮಾಣು ಬಾಂಬ್ ಸಿಡಿತದ ಅನಂತರದ ಪರಿಣಾಮಗಳಿಂದಾಗಿ, ತೊಡಲು ಬಟ್ಟೆ, ಆಹಾರ, ವಾಸಿಸಲು ಮನೆಯಿಲ್ಲದೇ ಅವರು ಪಡಬಾರದ ಕಷ್ಟಪಟ್ಟರು. ಅನೇಕ ಸಲ ಅವರು ನಾವ್ಯಾಕೆ ತಾಯಿ ಸತ್ತ ದಿನವೇ ಸತ್ತು ಹೋಗಲಿಲ್ಲ ಎಂದು ವಿಷಾದ ಪಟ್ಟಿದ್ದಿದೆ. ಸಕೂಯೇಳ ತಂಗಿ ಗಾಯಕ್ಕೆ ಆದ ಶಸ್ತ್ರ ಚಿಕಿತ್ಸೆಯಿಂದ ದೀರ್ಘಕಾಲ ನರಳಿದಳು. ಆ ಗಾಯ ವಾಸಿಯಾಗಲೇ ಇಲ್ಲ; ಕೊನೆಯ ದಾಗಿ ಅವಳು ಚಲಿಸುವ ರೈಲು ಹಾದಿಗೆ ಜಿಗಿದು ಪ್ರಾಣಾರ್ಪಣೆ ಮಾಡಿಕೊಂಡಳು. ಆ ಕುಟುಂಬದ ಪೈಕಿ ಬದುಕಿ ಉಳಿದದ್ದು ಸಕೂಯೇ ಮಾತ್ರ. ಬದುಕುವ ಚೈತನ್ಯ ಕಂಡುಕೊಂಡ ಆಕೆ ನಾಗಾಸಾಕಿ ನಗರಕ್ಕೆ ಬಂದ ಅನೇಕ ಯುವಕರಿಗೆ ತನ್ನ ಕತೆ ಹೇಳಿದ್ದಾಳೆ, ತನ್ನ ಅನುಭವ ಹಂಚಿಕೊಳ್ಳಲು ಜಗತ್ತಿನ ಅನೇಕ ಪ್ರದೇಶಗಳಿಗೆ ಹೋಗಿ ಬಂದಿದ್ದಾಳೆ.

ನೊಬುಯಾಕಿ ಮಿತ್ಸೂಷಿ, ಬಾಂಬ್ ಸಿಡಿದ ದಿನ ಇನ್ನೂ ಹುಟ್ಟಿರ ಲಿಲ್ಲ. ತನ್ನ ತಾಯಿಯ ಗರ್ಭದಲ್ಲಿದ್ದ. ಅವನ ತಾಯಿ 3 ತಿಂಗಳ ಗರ್ಭಿಣಿ, ಬಾಂಬ್ ಸ್ಫೋಟಿಸಿದ ಕೇಂದ್ರ ಸ್ಥಳದಿಂದ 1.8 ಕಿ.ಮೀ ದೂರದಲ್ಲಿದ್ದಳು. ಬಾಂಬಿನ ಪರಿಣಾಮದಿಂದ ಮಿತ್ಸೂಷಿ ಮೈಕ್ರೊಸಿಫಾಲಿ ಹೊತ್ತು ಹುಟ್ಟಿದ; ಅವನ ತಲೆ ಸಣ್ಣಗಿತ್ತು. ಅವನ ಶಾರೀರಿಕ ಬೆಳವಣಿಗೆ ಕುಂಠಿತವಾಯಿತು. ಮಾನಸಿಕವಾಗಿ ಕೂಡ ಆತ ಸಹಜ ಪರಿಸ್ಥಿತಿ ಯಲ್ಲಿರಲಿಲ್ಲ. ಅವನ ತಾಯಿ ಮತ್ತು ಸಹೋದರರು ಅವನನ್ನು ಕಡೆಗಣಿಸಿ ದರು. ಹೀಗಾಗಿ ಆತ ಅನೇಕ ಆರೋಗ್ಯ ಸಮಸ್ಯೆಗಳ ನಡುವೆ ಒಂಟಿ ಯಾಗಿ ಬದುಕಬೇಕಾಯಿತು. ಎಲ್ಲರಂತೆ ಬೆಚ್ಚಗಿನ ಮನೆಯಲ್ಲಿ ವಾಸಿಸಬೇಕೆಂದು ಅವನು ಬಯಸಿದ್ದ. ಆದರೆ 47ನೇ ವಯಸ್ಸಿನಲ್ಲಿ ತನ್ನ ಜೀವನವನ್ನು ಅಂತ್ಯಗೊಳಿಸಿಕೊಂಡ. ಬಾಂಬ್ ಸಿಡಿದಾಗ ಇನ್ನೂ ತಾಯಿ ಹೊಟ್ಟೆಯಲ್ಲಿ ಭ್ರೂಣಾವಸ್ಥೆಯಲ್ಲಿದ್ದ ಮಕ್ಕಳು ವಿರೂಪ ಹೊಂದಿದ್ದರು, ಇಲ್ಲವೇ ಚಿಕ್ಕಂದಿನಲ್ಲೇ ತೀರಿಕೊಂಡರು.

ಸೆಂಜಿ ಯಮಗುಚಿ ಪ್ರೌಢಶಾಲೆಯ ವಿದ್ಯಾರ್ಥಿ. ಇನ್ನೇನು ಅವನಿಗೆ 15 ವರ್ಷ ತುಂಬಬೇಕಿತ್ತು. ಅಂಗಿ ಕಳಚಿ, ಶಸ್ತ್ರಾಸ್ತ್ರ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ, ಸ್ಫೋಟಕ ಕೇಂದ್ರದಿಂದ ಅವನು 1.2 ಕಿ.ಮೀ ದೂರದಲ್ಲಿದ್ದ. ಕ್ಷಣಮಾತ್ರದಲ್ಲಿ ಪರಮಾಣು ಬಾಂಬಿನ ಶಾಖ ಅವನ

ಶರೀರದ ಮೇಲುಭಾಗವನ್ನು ಸುಟ್ಟು ಹಾಕಿತ್ತು. ಅವನ ಶರೀರದ ಸುಟ್ಟ ಗಾಯಗಳಿಗೆ ಸೋಂಕು ತಗುಲಿ ತುಂಬ ವೇದನೆ ಪಡುತ್ತಿದ್ದ. ಅವನು ಬದುಕಿ ಉಳಿದದ್ದೇ ಒಂದು ಪವಾಡ. ಆದರೆ ಪರಮಾಣು ಬಾಂಬಿನ ಸುಟ್ಟಗಾಯ ಕಲೆಗಳನ್ನ ಉಳಿಸಿಬಿಟ್ಟಿತು. ಅವನ ಬಾಯಿ ಹಿಸಿದು ವಿರೂಪಗೊಂಡಿತ್ತು. ಬಲಕಿವಿ ಕನುಗಿದ ಕಾರ್ಟಿಲೇಜ್‌ನಿಂದ ಕುಗ್ಗಿತ್ತು. ಮುಖ ಸುಟ್ಟು ವಿರೂಪಗೊಂಡಿತ್ತು. ಇಂದಿಗೂ ಅವನು ತನ್ನ ಕಿಲಾಯಿದ್ ಕಲೆಗಳ ಶಸ್ತ್ರಚಿಕಿತ್ಸೆ, ಯಕೃತ್ತಿನ ರೋಗ ಮತ್ತು ಲ್ಯೂಕೇಪೇನಿಯಾಗಾಗಿ ಅನೇಕ ಸಲ ಆಸ್ಪತ್ರೆ ಸೇರಿಕೊಂಡಿದ್ದಾನೆ. ಇಷ್ಟೆಲ್ಲ ತೊಂದರೆಗಳ ನಡುವೆಯೂ ಆತ ಪರಮಾಣು ಶಸ್ತ್ರಾಸ್ತ್ರಗಳ ನಿರ್ಮೂಲನಕ್ಕೆ ತನ್ನನ್ನು ಸಮರ್ಪಿಸಿಕೊಂಡಿದ್ದಾನೆ; ಪರಮಾಣು ಶಸ್ತ್ರಾಸ್ತ್ರಗಳಿಂದ ಜಗತ್ತನ್ನು ಸಂಪೂರ್ಣ ಮುಕ್ತಗೊಳಿಸಬೇಕೆಂದು ಅವನು ಜಗತ್ತಿನ ಎಲ್ಲರಲ್ಲಿ ವಿನಂತಿಸಿಕೊಂಡಿದ್ದಾನೆ. ಈಗ ಅವನು ನಮ್ಮ ಸಂಘಟನೆಯ ಸಹ ಅಧ್ಯಕ್ಷನಾಗಿ ಸೇವೆ ಸಲ್ಲಿಸುತ್ತಿದ್ದಾನೆ.

ಪರಮಾಣು ಬಾಂಬ್‌ಗಳು ಮನುಷ್ಯರನ್ನು ಮನುಷ್ಯರಂತೆ ಬಾಳಿ ಮನುಷ್ಯರಂತೆ ಸಾಯಲು ಬಿಡುವುದಿಲ್ಲ. ಪರಮಾಣು ಶಸ್ತ್ರಾಸ್ತ್ರಗಳು ಸಂಪೂರ್ಣ ವಿನಾಶವನ್ನು ಗುರಿಯಾಗಿಸಿಕೊಂಡ ಹುಚ್ಚರ ಶಸ್ತ್ರಾಸ್ತ್ರಗಳು. ಸಂಪೂರ್ಣ ಕೇಡುಕಿನ ಈ ಶಸ್ತ್ರಾಸ್ತ್ರಗಳಿಗೆ ಇರಲು ನಾವು ಅವಕಾಶ ಕೊಡಬಾರದು.

1996ರಲ್ಲಿ ಹೇಗ್ ನಗರದಲ್ಲಿ ಜರುಗಿದ ಅಂತಾರಾಷ್ಟ್ರೀಯ ನ್ಯಾಯಾಲಯ ಒಂದು ಸಲಹಾಭಿಪ್ರಾಯವನ್ನು ಮುಂದಿಟ್ಟಿತು: ಅಂತಾರಾಷ್ಟ್ರೀಯ ಕಾನೂನುಗಳ ಪ್ರಕಾರ ಪರಮಾಣು ಶಸ್ತ್ರಾಸ್ತ್ರಗಳ ಬಳಕೆ ಮತ್ತು ಬಳಸುವ ಬೆದರಿಕೆ ಕಾನೂನು ಬಾಹಿರ ಎಂದು ಹೇಳಲಾಗಿತ್ತು. ಮೇ 2000ರಂದು ನ್ಯೂಕ್ಲಿಯರ್ ನಾನ್ ಪ್ರಾಲಿಫರೇಷನ್ ಟ್ರೀಟಿಯ ಪರಿಶೀಲನಾ ಸಭೆಯಲ್ಲಿ 5 ಘೋಷಿತ ಪರಮಾಣು ದೇಶಗಳು ಅಂತಿಮ ದಾಖಲೆ ಪತ್ರಗಳಿಗೆ ಒಪ್ಪಿಗೆ ಸೂಚಿಸಿದ್ದವು.

ಆ ದಾಖಲೆ ಪತ್ರ ಅಂದರೆ ಪರಮಾಣು ಶಸ್ತ್ರಾಸ್ತ್ರಗಳ ಸಂಪೂರ್ಣ ನಿರ್ಮೂಲನಕ್ಕೆ ಅವರು ಕರೆಕೊಟ್ಟಿದ್ದರು. ನಮ್ಮ ದೀರ್ಘಹೋರಾಟದ ನಂತರ ಇದರಿಂದ ಭರವಸೆಯ ಬೆಳಕು ಕಾಣಿಸಿದಂತಾಯಿತು; ಈಗ ಅವರು ಒಪ್ಪಂದ ಮತ್ತು ಪ್ರಮಾಣವನ್ನು ನಡೆಸಿಕೊಡಬೇಕೆಂದು ನಾವು ಒತ್ತಾಯಿಸಬೇಕು.

ಜಪಾನಿನ ಆಕ್ರಮಣಕಾರಿ ಯುದ್ಧ ಏಷಿಯಾದ ಜನರಿಗೆ ಅನೇಕ ಸಾವು ನೋವುಗಳನ್ನು ತಂದವು. ಮಹಿಳೆಯರ ಮೇಲಿನ ಘೋರ ಅಪರಾಧವೆಂದರೆ, 'ಮಿಲಿಟರಿ ಕಂಫರ್ಟ್ ವುಮನ್.' ತನ್ನ ಯುದ್ಧ ಆಕ್ರಮಣದ ಹೊಣೆಗಾರಿಕೆ ಒಪ್ಪಿಕೊಂಡು, ಎಲ್ಲ ಯುದ್ಧಗಳನ್ನೂ ತಿರಸ್ಕರಿಸಿ, ಪರಮಾಣು ಮುಕ್ತ ರಾಷ್ಟ್ರವಾಗುವಂತೆ ಸರ್ಕಾರವನ್ನು ಒತ್ತಾಯಿಸುವುದು ಜಪಾನಿನಲ್ಲಿರುವ ನಮ್ಮ ಜವಾಬ್ದಾರಿ. ನಮ್ಮಂತೆ ಜಗತ್ತಿನಲ್ಲಿ ಹಿಬಾಕುಷಗಳು ಇಲ್ಲದಿರುವಂತೆ ಖಚಿತ ಪಡಿಸಿಕೊಳ್ಳಲು ಇರುವ ಒಂದೇ ದಾರಿ ಪರಮಾಣು ಶಸ್ತ್ರಾಸ್ತ್ರಗಳಿಂದ ಮುಕ್ತವಾಗುವುದು.

ಶಾಂತಿಯನ್ನು ಶಸ್ತ್ರಾಸ್ತ್ರಗಳಿಂದ ಸಾಧಿಸಲಾಗುವುದಿಲ್ಲ; ರಕ್ಷಿಸಲಾಗುವುದಿಲ್ಲ. ಜಗತ್ತಿನ ಎಲ್ಲ ಜನತೆಯ ಸಹಕಾರ ಸ್ನೇಹದಿಂದ ಮಾತ್ರ ರಕ್ಷಿಸಿಕೊಳ್ಳಬಹುದು. ನಮ್ಮ ಮುಂದಿನ ಜನಾಂಗಕ್ಕೆ ನಾವು ಕೊಡುವ ಪ್ರಮುಖ ಕಾಣಿಕೆ **ಶಾಂತಿ**.

ಸ್ನೇಹಿತರೇ, ಇಡೀ ಮಾನವ ಜನಾಂಗದ ಮನಃಸ್ಸಾಕ್ಷಿ ಮತ್ತು ಜಾಣ್ಮೆಯನ್ನು ಸಂಘಟಿಸಿ, ಮಕ್ಕಳಿಗೆ ಪರಮಾಣು ಶಸ್ತ್ರ ಮುಕ್ತ, ಯುದ್ಧ ಭಯವಿಲ್ಲದ ಸಮಾಜ ಕಟ್ಟಲು ನಾವೆಲ್ಲರೂ ಜೊತೆಯಾಗಿ ಕೆಲಸ ಮಾಡೋಣ.

ನನ್ನ ಸಾಕ್ಷಿ ಪತ್ರಕ್ಕೆ ಆಧಾರವಾಗಿ ಕೆಲವು ವಸ್ತುಗಳು ಮತ್ತು ದಾಖಲೆಗಳನ್ನ ನ್ಯಾಯಾಧೀಶರಿಗೆ ಸಲ್ಲಿಸುತ್ತಿದ್ದೇನೆ. ಜಪಾನಿನಲ್ಲಿ ಶಾಂತಿ ಸಂಕೇತವಾಗಿರುವ ಹಿಬಾಕುಷಗಳು ಕಾಗದದಿಂದ ತಯಾರಿಸಿದ ಸಾವಿರ ಬೆಳ್ಳಕ್ಕಿಗಳನ್ನು ಸಮರ್ಪಿಸುತ್ತಿದ್ದೇನೆ.

ಕೃತಜ್ಞತೆಗಳು.

❑

"......ತೋಮುವಿಗೆ ಅಣ್ಣ ಲಕನನಂತೆ ಪುಸ್ತಕ ಸ್ಲೇಟುಗಳೂ ಬೇಕು; ಅಣ್ಣ ಐತನಂತೆ ಹಾಡು ಕುಣಿತಗಳೂ ಬೇಕು. ಹೀಗಿದ್ದೂ ತಾಯಿ ಮೈರೆಯ ಕಣ್ಣೀರಿನಲ್ಲಿ ತನ್ನ ಮುಖ ಕಾಣುವ ತವಕ ಅವಳಿಗೆ. .....ತಾನು ಹುಡುಗಿಯಾಗಿ ಹುಟ್ಟಿದ ಕಾರಣಕ್ಕೆ ಒಳಗೆ ಹಿಂದೆ ಬದಿಗೆ ತಾನೇಕೆ ಸರಿಯಬೇಕು ಎನ್ನುವುದು ಆ ಪುಟ್ಟ ಹುಡುಗಿಯ ತರ್ಕಕ್ಕೆ ಸಿಗುತ್ತಿರಲಿಲ್ಲ. ಶಾಲೆಯ ಪುಸ್ತಕದಲ್ಲೂ, 'ಬಸವ ಪಾಠ ಓದುತ್ತಾನೆ, ಕಮಲ ನೀರು ತರುತ್ತಾಳೆ' ಎಂದು ಯಾಕೆ ಇದೆ....! ಕಮಲ ಯಾಕೆ ಪಾಠ ಓದಬಾರದು?, ...ಪರಂಪರೆಯ ಪಂಬದರ ಒಬ್ಬಳು ಹುಡುಗಿಗೆ ಎಲ್ಲ ಹೆಣ್ಣುಗಳಂತೆಯೇ ಮಾತನಾಡಲು ಅವಕಾಶ ಕಡಿಮೆ...ತನ್ನ ಊರಿನಲ್ಲೂ ಪಂಬದ ಹುಡಿಗೆಯರೆಲ್ಲ ಮದುವೆ, ಅಡುಗೆ, ಮಕ್ಕಳನ್ನು ಹೆರಲು, ದುಡಿದು ದುಡಿದು ಮಣ್ಣು ಸೇರಲು ಮಾತ್ರ ಹುಟ್ಟಿದಾರೆಯೆ? ಹುಡುಗನಿಗೊಂದು ನ್ಯಾಯ, ಹುಡುಗಿಗೊಂದು ನ್ಯಾಯ! ಅಪ್ಪನಿಗೊಂದು ನ್ಯಾಯ, ಅಮ್ಮನಿಗೊಂದು ನ್ಯಾಯ, ಗಂಡನಿಗೊಂದು ನ್ಯಾಯ, ಹೆಂಡತಿಗೊಂದು ನ್ಯಾಯ, ಹಾಗಾದರೆ ನ್ಯಾಯ ಎನ್ನುವುದು ಗಂಡೆ?....."

ವೀರಪ್ಪ ಮೊಯಿಲಿ

('ತೆಂಬರೆ' ಕಾದಂಬರಿಯಿಂದ)



ಖುಲ್ಲಂ ಖುಲ್ಲ

ಹೆಗಲ ಮೇಲೊಂದು ಗಾಲಿ ಮಿಷನ್ನು
ಒಂದೆಳೆ ಬಣ್ಣದ ಲುಂಗಿ, ಚೌಕುಳಿ ವಲ್ಲಿ
ಬಾಯ್ತುಂಬ ಒಣ ಕೆಮ್ಮು, ನಿಮಿಷಕ್ಕೊಂದು ದಪ ಕಫ ವಿಸರ್ಜನೆ
ಇದ್ದಂಗಲ್ಲದ ಇರದಂಗಲ್ಲದ ಹುಚ್ಚೆಳ್ಳು ಪುಡಿಯಂಥ ಕುರುಚಲು ಮುಖಬೆಳೆ
ಅತಿಯಲ್ಲದ ವಿನಯ ಮಿತಿಯಿಲ್ಲದ ಕಸಬುದಾರಿಕೆ
ಮೂರುತಿಂಗಳಿಗೊಂದಾವರ್ತಿ ಬರುವರು ಇಂಥ ಸಾಬಿಯೊಬ್ಬರು ನಮ್ಮೂರಿಗೆ
ರೂಢಿಯಲಿ ಸಾಣೆಸಾಬರು ಎನ್ನುವುದೇ ನಿಂತುಹೋಗಿ
ಅವರ ರೂಬು ರೂಬು ಹೆಸರು ಯಾರೂ ಭೇದಿಸಲಿಚ್ಛಿಸದ
ನಾಮ ದುರ್ಗದ ರಹಸ್ಯ

ಬಂದವರು ಬಂದವರೇ ಪಾರಕ್ಕನ ಬಣವೆ ಮಗ್ಗುಲ ಚಪ್ಪಡಿಗೆ ಸ್ಥಾಪಿತರಾಗಿ
ಚರ್ರ್ ಚರ್ರ್ ಚರ್ರೋೕೕೕ ನಾಲ್ಕು ಕಿಡಿ ಸಿಡಿಸಿದರೆ ಸಾಕು
ಮೂಲು ಮೂಲೆಯ ಬತಾಯಿ, ರೋಟಿ, ಕುಡುಲು, ಕೊಚ್ಚುಗತ್ತಿ
ತುರೇಮಣೆ, ಮಚ್ಚು, ಕೊಡಲಿ, ಕೈಕತ್ತರಿ, ಅಡಕತ್ತರಿ,
ವಗೈರೆಗಳು ಜಮಾಯಿಸಿ
ಕ್ಷಣಾರ್ಧದಲ್ಲಿ ಪಾರಕ್ಕನ ಹಿತ್ತಲು ಆಯುಧಾಗಾರ
ಗಾಯಾಳು ಶಸ್ತ್ರ ಶಿಬಿರ

ನೀವು ನೋಡಬೇಕು ಸಾಬರ ಕೈಚಳಕ
ಚಕಚಕ ರೋಗಿ ಗಳ ಪಿಂಗಡಿಸುವರು
ಕಣ್ಣು ನಾಲಿಗೆ ಕೊರಳು ಗಳ ತಿರುತಿರುಗಿಸಿ ಆಯುಸ್ಸು ಗುಣಿಸಿ
ಹಳೆ ಚಿಕಿತ್ಸೆಗಳ ಕುರುಹ ಹಿಡಿದು
ಇಂದಿನ ವೈದ್ಯ ತೀರ್ಮಾನಿಸಿ
ಘೋಷಿಸುವರು ತಮ್ಮ ರುಸುಮು

ತಗಳ್ಳಿ, ನಮ್ಮೂರ ಸ್ತ್ರೀಶಕ್ತಿ ತತುಕ್ಷಣವೆ ಚಾಲೂ
ಸಾಬರ ಕರಕೌಶಲ ಪುಸಲಾಯಿಸುತ್ತಲೆ ಸಂಶಯಿಸಿ
ಮಿಷನ್ನಿನ ದಕ್ಷತೆ ಪ್ರಮಾಣಿಸುತ್ತಲೆ ಅನುಮಾನಿಸಿ
ಚೌಕಾಶಿಯ ಗ್ರಾಫು ಏರಿಸಿ ಇಳಿಸಿ ಏರಿಸಿ ಇಳಿಸಿ
ಯಾವ ಷೇರುಪೇಟೆಗೂ ಕಮ್‌ನಹಿ ಕಮ್‌ನಹಿ ಕಮ್‌ನಹಿ
ಕೊನೆಗೊಂದು ಬಿಂದುವಿನಲ್ಲಿ ರಾಜೀಕಬೂಲಿ
ಖುಲ್ಲಂ ಖುಲ್ಲ ಬಲಗೈಯ ವಸೂಲಿ

ಪಾರಕ್ಕನಿಗೆ ರಿಯಾಯಿತಿ ಶುಲ್ಕ, ಮತ್ತೆ ಹಿತ್ತಲು ಅವಳದ್ದ(!)ವ್ರೋ ಹೇಳಿ
ಕಾಫಿಗೀಫಿ ಸಂದಾಯವಾದರೆ ಉಂಟು ಸಂಪೂರ್ಣ ಮನ್ನವ್ರಾ

ಮುಚ್ಚಂಜೆ ತನಕ ಏಕವೈದ್ಯ ಶಸ್ತ್ರ ಚಿಕಿತ್ಸೆ ಯಶಸ್ವೀ ನಡೆದು
ಆ ಗಳಿಗೆ ಮಟ್ಟಿಗೆ ಅಲಗುಗಳು ಲಕ ಲಕ ಹೊಳೆದು
ಊರ ಹೆಂಗಸರಿಗೆ ತತ್ಸಮ ತದ್ಭವ
ರವಷ್ಟು ಸಮಾಧಾನ!

ಮಕ್ಕತ್ತಲೆ ಹೊತ್ತಿಗೆ ಚೌಕುಳಿವಲ್ಲಿ ಕೊಡವಿ
ಕೊನೆಸಾರಿ ಕ್ಯಾಕರಿಸಿ ಮಿಷನ್ನು ಹೆಗಲಿಗೇರಿಸಿ ಸಾಬರು ನಿರ್ಗಮನ
ಜಗುಲಕ್ಕ ಜಗುಲಕ್ಕ ಜಗುಲಕ್ಕ ಬಲಭುಜ ವಾರೆಯಾಗಿ
ಭಾರಕ್ಕೆ ದಪ್ಪ ಹೆಜ್ಜೆ
ಅವರು ಕಣ್ಣು ಮರೆಯಾಗುವ ತನಕ ಕಾದಿದ್ದು
ಮೋಟುಬೀಡಿ, ಕಫದಗುಪ್ಪೆ, ಉದುರಿದ ತುಕ್ಕು ಇತ್ಯಾದಿಗಳಿಗೆ
ಪಾರಕ್ಕನ ಕಸಬರಿಕೆಯಲಿ ರುದ್ರಾಭಿಷೇಕ
ಜೊತೆಗೆ ಸಾಬರಿಗೂ ವಿಶೇಷ ಮಂತ್ರಪುಷ್ಪ

ತಿಂಗಳ ತನಕ ಯೋಚನೆಯಿಲ್ಲ
ಎಲ್ಲರ ಮನೇಲೂ ಸರಾಗ ಪ್ರಯೋಗ ಸಾಬುವಿಗೆ ಭಳಿರೆ ಭೇಷ್!
ಮೆಲ್ಲ ಮೆಲ್ಲಗೆ ಮತ್ತದೇ ಹಳೆಯ ಖಾಯಿಲೆ ಮರುಕಳಿಸಿ
ಮೊಂಡು ಗುಂಡಪ್ಪಗಳು ಚಂಡಿಗೆ ಕುಂತರೆ
ಗುರ್ರೆನ್ನುವ ಹೆಂಗಸರು ಗರ್ರ ಗರ್ರ ರೇಗುವರು
ಇದರಾಗೆ ಕೋಳಿ ಕುಯ್ದಂಗೇ ಐತೆ, ಸಾರು ಮಾಡ್ದಂಗೇ ಐತೆ
ತೋ ತೋ

ಗಂಡಸರು ಕೂಳೆಗೆ ತಿಕ್ಕಿ ಕಲ್ಲಿಗೆ ತಿಕ್ಕಿ
ತಮ್ಮ ನಾಟಿ ಮದ್ದು ಮುಗಿದ ಮೇಲೆ
ಹೊತ್ತಾರೆಯೇ ಸಾಬರಿಗೆ ಜಲ್ದಿ ಬುಲಾವ್
ಪಾರಕ್ಕನ ಹಿತ್ತಲಲಿ ಇನ್ನೊಂದು ಆಪರೇಷನ್ ಕ್ಯಾಂಪು

-೨-

ಸಾಬರು ಇತ್ತೀಚೆಗೆ ಹೆಚ್ಚು ಓಡಾಡುತ್ತಾರೆ
ದಿನಾ ಪತ್ರಿಕೆಯ ಹೆಡ್‌ಲೈನ್‌ಗಳಲ್ಲಿ
ಟೀವಿಯ ಬಾಟಮ್ ಬಾಕ್ಸ್‌ಗಳಲ್ಲಿ
ಎದುರಿಗೆ ಸಿಕ್ಕಿ ಅದೇ ವಾಲಿದ ಭುಜದಲ್ಲಿ
ಜಗ್ಗುಲಕ ಜಗ್ಗುಲಕ ಜಗ್ಗುಲಕ ದಪ್ಪ ಹೆಜ್ಜೆ
ಕೇಳುತ್ತಾರೆ ಎಲ್ಲಾ ಚೆನ್ನಗಿದ್ದೀರೇನಮ್ಮ
ಅದೇ ಅತಿಯಿಲ್ಲದ ವಿನಯ ಮಿತಿಯಿಲ್ಲದ ಕೌಶಲ


ಸಾಣೆ ಸಾಬರಿಗೆ
ಅವರಿವರ ಹತಾರಗಳೇ ಅನ್ನ
ಸ್ವಂತಕ್ಕೊಂದು ಬೆಂಕಿಪೊಟ್ಟಣವನ್ನೂ ಮಡಗಿರಲಿಲ್ಲ ಪುಣ್ಯಾತ್ಮ
ಬೀಡಿ ತುಂಡಿಗೆ ಪಾರಕ್ಕನ ನೀರೊಲೆ ಕೆಂಡ
ಆಯುಷ್ಕರ್ಮಕ್ಕೆ ಕೈಮರದ ತಾವಿನ ಆಂಜನೇಯಲು ಸೆಲೂನು
ಆಯುದ್‌ಪೂಜೆ ದಿನ ಅವರೂ ಮಿಷನ್ನಿಗೆ ರಜಾ ಮಂಜೂರ್ಮಾಡುವರು

ಸಾಬರು ಜಾಸ್ತಿ ಓದಿರಲಿಲ್ಲ
ನಮ್ಮೂರ ಹೆಂಗಸರು ಅವರಿಗಿಂತ ಕಮ್ಮಿ
ಒಬ್ಬರಿಗೊಬ್ಬರು ಅರ್ಥವಾಗಿದ್ದರು

• ಲಲಿತಾ ಸಿದ್ಧಬಸವಯ್ಯ

ರೇಣುಕಾ ಮಾರ್ಕಂಡೆ: ಪರಿಚಿತಾಪರಿಚಿತ ಮುಖಗಳು

● ಎಂ.ಎಚ್. ಕೃಷ್ಣಯ್ಯ




ವ್ಯಕ್ತಿಗಳ ಮುಖಚಿತ್ರಗಳನ್ನೋ, ಎದೆಮಟ್ಟದ ಚಿತ್ರಗಳನ್ನೋ ವ್ಯಕ್ತಿಚಿತ್ರಗಳು, ಭಾವಚಿತ್ರಗಳು, Portraits ಎನ್ನುತ್ತೇವೆ. ಅವು ವರ್ಣ ಚಿತ್ರಗಳಾಗಿರಬಹುದು, ಛಾಯಾಚಿತ್ರಗಳಾಗಿರ ಬಹುದು. ಮುಖ್ಯವಾಗಿ ಅವು ವ್ಯಕ್ತಿಗಳ ನೈಜ, ವಾಸ್ತವ, ಇರುವ ಹಾಗೆ ಚಿತ್ರಿತವಾಗಿರುವ, ಬಿಂಬ ಸೆರೆಹಿಡಿದಿರುವ ಚಿತ್ರ ಎಂಬುದು ಸಾಮಾನ್ಯ ಭಾವನೆ. ಆದರೆ ಛಾಯಾಚಿತ್ರ ಯುಗದಲ್ಲೂ ಅದು ಭ್ರಮೆಯೆ. ಹಿಂದೆ ಶ್ರೀಮಂತ ವರ್ಗದವರು, ರಾಜರುಗಳು ತಮ್ಮ ಚಿತ್ರಗಳನ್ನು, ಎದೆಮಟ್ಟದ ಅಥವಾ ಪೂರ್ಣ ನಿಲುವಿನ ಚಿತ್ರಗಳನ್ನು ಕಲಾವಿದರಿಂದ ಬರೆಸುತ್ತಿದ್ದರು. ತಾವು ಹೇಗೇ ಇರಲಿ, ಸುಂದರವಾಗಿ ಚಿತ್ರಿತವಾಗಿರಬೇಕೆಂಬುದು ವೈಭವಯುತವಾಗಿ ಕಾಣಬೇಕೆಂಬುದು ಅವರಿಗೆ ಆಶೆ, ಇಚ್ಛೆಯಾಗಿರುತ್ತಿತ್ತು. ಹೀಗಾಗಿ ಹಿಂದೆ ರಚಿತವಾದ ವ್ಯಕ್ತಿಚಿತ್ರಗಳು ಎಷ್ಟರಮಟ್ಟಿಗೆ ಪ್ರಮಾಣಿಕ ನಿರೂಪಣೆ ಎಂಬುದು ಪ್ರಶ್ನಾರ್ಹವೆ. ಛಾಯಾಚಿತ್ರವೂ ಇಂತಹ ಉದ್ದೇಶಕ್ಕಿಂತ ಬೇರೆಯಾಗಿರುವುದಿಲ್ಲ. ಚೆನ್ನಾಗಿ ಕಾಣಬೇಕು ಎಂಬುದು ಮುಖ್ಯ. ಈ ಎಲ್ಲ ದೃಷ್ಟಿಗಳ ಹಿನ್ನೆಲೆಯಲ್ಲಿ, ಏಳೆಂಟು ವರ್ಷಗಳ ಹಿಂದೆ, ಕಲಾವಿದೆ ರೇಣುಕಾ ಮಾರ್ಕಂಡೆಯವರು ಪ್ರದರ್ಶಿಸಿದ 'ರಿ ಇಮೇಜಿಂಗ್ ದಿ ರಿಯಲ್ ಫೇಸ್' ಚಿತ್ರಸರಣಿಯ ವ್ಯಕ್ತಿಚಿತ್ರ/ಮುಖಚಿತ್ರಗಳನ್ನು ಗಮನಿಸಬೇಕಿದೆ. ಮೇಲೆ ವಿವರಿಸಿದ ವ್ಯಕ್ತಿಚಿತ್ರಗಳಿಗಿಂತ ಇವು ಭಿನ್ನವಾದುವು. ವ್ಯಕ್ತಿಗಳ ಮುಖಗಳ ಚಿತ್ರಣವೇ ಆದರೂ ನೈಜ, ವಾಸ್ತವ ನಿರೂಪಣೆ ಉದ್ದೇಶವೂ ಅಲ್ಲ. ಮುಖಗಳ ರಚನೆಯ ಸಂಯೋಜನೆಯಲ್ಲಿ ಅಮೂರ್ತ ಚಿತ್ರ ರಚನೆಯಂತಹ ರೇಖೆಗಳು, ಬಣ್ಣಗಳ ಲೇಪನ ಮುಖದ ಮೇಲೂ ಹಾಯುತ್ತವೆ. ಅವು ಎಂದೋ ಕಂಡ, ನೋಡಿ ಗಮನಿಸಿದ ಮುಖಗಳೇ ಇರಬಹುದು. ಆದರೆ ರೂಢಿಯ ಅರ್ಥದಲ್ಲಿ ವ್ಯಕ್ತಿಚಿತ್ರಗಳಲ್ಲ.



ಇಲ್ಲಿ ಪರಿಚಿತ ಮುಖಗಳು, ಮುಖ ಚಹರೆಗಳು ಮರೆಯಾಗಿ ಅಭಿವ್ಯಕ್ತಿ ಗುಣಾಂಶಗಳು ಪ್ರಧಾನವಾಗಿ ತಾವೇ ತಾವಾಗಿ ಹಾಯುತ್ತವೆ. ಆಗ ಪರಿಚಿತ ಮುಖವೂ ಅಪರಿಚಿತವಾಗುತ್ತದೆ. ಚಹರೆ ಯಾಚೆಗಿನ ಭಾವ ಅನುಭೂತಿಗಳು ಬೇರೆ ರೂಪ ಪಡೆದಂತೆ, ಬೇರೆ ಮುಖ ಪಡೆದಂತೆ, ಮುಖವಾಡಗಳಂತೆ

ರೇಣುಕಾ ಮಾರ್ಕಂಡೆಯವರು ಕನ್ನಡ ಸಾಹಿತ್ಯದಲ್ಲಿ ಎಂ.ಎ ಪದವೀಧರರು. ಹಾಗೇ ಗುಲ್ಬರ್ಗಾದ ಎಂ.ಎಂ.ಕೆ. ದೃಶ್ಯ ಕಲಾ ಕಾಲೇಜಿನಿಂದ ಚಿತ್ರಕಲೆಯಲ್ಲಿ ಪದವಿ ಪಡೆದವರು. ಹಂಪಿ ವಿಶ್ವವಿದ್ಯಾಲಯದಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನೂ ಪಡೆದಿದ್ದಾರೆ. ಧಾರವಾಡದಲ್ಲಿ ನೆಲೆಸಿರುವ ಅವರು ಪ್ರಸ್ತುತ 'ಕರ್ನಾಟಕ ಕಲೆಯಲ್ಲಿ ವೈಷ್ಣವ ಸಂಪ್ರದಾಯ ಚಿತ್ರಗಳು' ವಿಷಯ ಕುರಿತು ಡಾಕ್ಟರೇಟ್‌ಗಾಗಿ ಅಧ್ಯಯನ, ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಏಕವ್ಯಕ್ತಿ ಕಲಾ ಪ್ರದರ್ಶನಗಳಲ್ಲದೆ ಅನೇಕ ಸಮೂಹ ಪ್ರದರ್ಶನ, ಕಲಾ ಶಿಬಿರ-ಕಾರ್ಯಾಗಾರಗಳಲ್ಲಿ ಭಾಗಿಯಾಗಿದ್ದಾರೆ. ಕೆ.ಕೆ. ಹೆಬ್ಬಾರ್ ಪ್ರಶಸ್ತಿ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ, ಪುಣೆಯ ತಿಲಕ ಸ್ಮಾರಕ ಪ್ರಶಸ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ. ಅವರ ಕಲಾಕೃತಿಗಳು ದೆಹಲಿ, ಭೂಪಾಲ್, ಮುಂಬಯಿ, ಬೆಂಗಳೂರು, ಗುಲ್ಬರ್ಗ, ಹಂಪಿ, ಧಾರವಾಡ, ಉಜ್ಜಯಿನಿಗಳಲ್ಲದೆ ಜರ್ಮನಿ, ಸ್ವಿಟ್ಜರ್‌ಲೆಂಡ್, ಗ್ರೀಸ್, ಲಂಡನ್‌ಗಳ ಖಾಸಗಿ ಹಾಗೂ ಸಾರ್ವಜನಿಕ ಸಂಗ್ರಹಾಲಯಗಳಲ್ಲಿ ಸೇರಿವೆ.


ಭಾಸವಾಗುತ್ತವೆ. ಎಂದರೆ ಮುಖವಾಡ ಧರಿಸಿದಂತೆಯೆ ಎಂದರ್ಥವಲ್ಲ. ಹಾಗೆ ನೋಡಿದರೆ ಅವು ಅವಾಸ್ತವವೇನಲ್ಲ. ಕೇವಲ ಅನುಭವ, ಸಂವೇದನಾ ವೇದ್ಯವಾದುವು. ಅಲ್ಲದೆ ಅವು ನೈಜ ಮುಖಚಹರೆಯ ವಿರೂಪವೂ (distortion) ಅಲ್ಲ; ಬಾಹ್ಯ ನೈಜತೆ ಕರಗಿ ಪಡೆಯುವ ಹೊಸ ರೂಪಗಳು.







ಈ ಮುಖಗಳನ್ನು ನೋಡುತ್ತ ನೋಡುತ್ತ ಇನ್ನೊಂದು ಪ್ರಶ್ನೆಯೂ ನಮ್ಮನ್ನು ಕಾಡಬಹುದು. ದಿನ ನಿತ್ಯ ಬೇರೆ ಬೇರೆ ವ್ಯಕ್ತಿಗಳನ್ನು, ಮುಖಚಹರೆಗಳನ್ನು ಕಾಣುತ್ತಿರುತ್ತೇವೆ. ಎಲ್ಲೋ ಕೆಲವು ಮನೋ ಮುದ್ರಿಕೆಯಾಗಿ ಉಳಿಯಬಹುದು, ಅವುಗಳ ವಿಶಿಷ್ಟ ಅಭಿವ್ಯಕ್ತಿಶೀಲ ಗುಣಗಳಿಂದ. ಉಳಿದಂತೆ ಬಹುಪಾಲು ಮುಖಗಳು ಮನಃಪಟಲದ ಮೇಲೆ ಹಾಯ್ದು ಮರೆಯಾಗುತ್ತವೆ. ಅಭಿವ್ಯಕ್ತಿಶೀಲ ಕಾಡುವ ಮುಖಗಳು ಕಲಾವಿದೆಯ ಸೃಜನಶೀಲತೆಗೆ ಪ್ರೇರಣೆಯಾಗ ಬಹುದು. ಹೀಗಾಗಿ ಪುನರ್‌ಭವದ ಆ ರೂಪಗಳು ವಿಭಿನ್ನವಾಗುತ್ತವೆ. ಮೇಲೆ ಮುಖವಾಡದಂತೆ ಎಂದು ಬಳಸಿದ ಶಬ್ದ ಉದ್ದೇಶಪೂರ್ವಕ. ಬೆಳಗಿನಿಂದ ಸಂಜೆವರೆಗಿನ ನಮ್ಮ ಮುಖಚಹರೆಗಳೂ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಬದಲಾಗುತ್ತಿರುತ್ತವೆ. ಒಬ್ಬೊಬ್ಬರಿಗೆ ಒಂದೊಂದು ವ್ಯಕ್ತಿತ್ವದ ಕಲ್ಪನೆಗೆ ಅವಕಾಶ ನೀಡುತ್ತವೆ, ಅಂತಹ ಮುದ್ರಿಕೆ ನೀಡುತ್ತವೆ. ನಾವು ಮುಖವಾಡ ಧರಿಸುವುದಿಲ್ಲ, ಆದರೆ ಮುಖವಾಡ ತಳೆಯುತ್ತೇವೆ. ಪ್ರಶ್ನೆ: ನಮ್ಮ ನೈಜ ಮುಖಚಹರೆ ಯಾವುದು? ಬಾಹ್ಯ ಮುಖಚಹರೆಯೆ? ಮೂಲ ಅಂತರಂಗದ್ದೆ? ಅಥವಾ ಭಾವ, ಸ್ವಭಾವ ಸಾಮಾನ್ಯವಾದದ್ದೆ? ಕಲಾವಿದೆ ರೇಣುಕಾ ಅವರು ಈ ಸಂಕೀರ್ಣತೆಯನ್ನು ಈ ರಚನೆಗಳಿಂದ ಪ್ರಶ್ನಿಸುವಂತಿದೆ. ಈ ವ್ಯಕ್ತಿಚಿತ್ರಗಳು ಮುಖಮಾತ್ರದ ರಚನೆಯಾಗಿಲ್ಲ; ವರ್ಣಯೋಜನೆ, ಅಲ್ಲಲ್ಲಿ ಕಾಣುವ ಸೂಚಕಗಳು ಒಟ್ಟು ರಚನೆಯ ಅನುಭವ ಕಟ್ಟಿಕೊಡುವಲ್ಲಿ ಅರ್ಥಪೂರ್ಣವಾಗುತ್ತವೆ.

ರೇಣುಕಾ ಮಾರ್ಕಂಡೆಯವರ 'ತಾಯಿ' ಚಿತ್ರಸರಣಿಯೂ ವಿಶಿಷ್ಟ ಕೃತಿಗಳು. ನೋಡುಗನನ್ನು ಚಿಂತನೆಗೆ ತೊಡಗಿಸಿ ಕಾಡುತ್ತವೆ. ಇವು ಸುಂದರ ಚಿತ್ರ ಎಂದು ನೋಡಿ ನೋಟ ಹೊರಳಿಸುವಂತಹವಲ್ಲ. ಒಂದು ಚಿತ್ರ (ತಾಯಿ-I), ಇದು ಆಧುನಿಕ ಮಹಿಳೆಯ ಚಿತ್ರಣ ಮಾತ್ರವೇ ಆಗಿ ಉಳಿಯುವುದಿಲ್ಲ. ಬಲಪಕ್ಕದಲ್ಲಿ ಪುರುಷನ ಶಿಲಾ ಶಿರಶಿಲ್ಪಗಳಿವೆ, ಹಸಿರು ಬಣ್ಣದಲ್ಲಿ (ಶಿಲೆ=ಜಡ, ಹಸಿರು=ಪಾಚಿ ಕಟ್ಟಿದ್ದೆ?), ಮೂರು ತಲೆಗಳು ಹಿಂದಕ್ಕೆ ಕಾಲ-ದೇಶಗಳಲ್ಲಿ ಮರೆಯಾದಂತೆ ಅಥವಾ ಅಂದಿನಿಂದ ಇಂದಿನವರೆಗೆ ಕಾಲಗರ್ಭದಿಂದ ಪುರುಷನ ಜಡಶಿಲಾ ಮೂರ್ತಿತ್ವದಂತೆ. ಎಡಪಕ್ಕಕ್ಕೆ ಒಂದು ರೆಕ್ಕೆಗಳಿರುವ ವಿಮಾನ, ಪದ್ಮಾಸನಸ್ಥಳಾಗಿ ಕೈಮುಗಿದು ಕುಳಿತ ಹೆಣ್ಣನ್ನು ಸ್ವರ್ಗಕ್ಕೆ ಒಯ್ಯುತ್ತಿದೆ. ವಿಮಾನದ ಮೇಲೆ ಐದು ಕೇಸರಿ ಬಣ್ಣದ ಧ್ವಜಗಳು. ಅದಕ್ಕೆ ಮೇಲೆ ಎಡಭಾಗದಲ್ಲಿ, ಹೆಣ್ಣಿನ ಅಡ್ಡ ಮುಖದ ಹಿನ್ನೆಲೆಯಲ್ಲಿ, ಅಸ್ಪಷ್ಟವಾಗಿ ಎಲೆಹೂಗಳು ಚಿಗುರುತ್ತ ಅರಳುತ್ತ ಇರುವಂತೆ. ಅದಕ್ಕೆ ವಿರುದ್ಧ ಕೋನದಲ್ಲಿ, ಚಿತ್ರದ ಬಲ ತಳಭಾಗದಲ್ಲಿ ಉದುರಿರುವ ಎಲೆಗಳು. ಈ ಸೂಚಕ ಸಂಜ್ಞೆಗಳು ಒಟ್ಟು ಚಿತ್ರಕ್ಕೆ ಬೇರೆಯೇ ಅರ್ಥ ಕಟ್ಟಿಕೊಡುತ್ತವೆ. ಭಾರತೀಯ ಪರಂಪರೆಯಲ್ಲಿ ಹೆಣ್ಣನ್ನು ನಡೆಸಿಕೊಂಡು ಬಂದಿರುವ ಬಗೆಯನ್ನು, ಮಾಸ್ತಿ ಕಲ್ಲುಗಳ ಮೇಲಿನ ಉಬ್ಬು ಶಿಲ್ಪಗಳ ನೆನಪನ್ನು ತರುತ್ತವೆ. ಆಧುನಿಕ ವಿಜ್ಞಾನ







ಚಿತ್ರ-೧



ಚಿತ್ರ-೨

ಯುಗದಲ್ಲೂ ಇದು ತಪ್ಪಿದ್ದಲ್ಲ. ರೂಪಕನ್ವರಳನ್ನು ಸ್ವರ್ಗದ ವಿಮಾನ ಒಯ್ದಿರಬೇಕಲ್ಲವೆ?! ರೇಣುಕಾ ಅವರು ಹಂಪಿಯ ಕಲಾಶಿಬಿರದಲ್ಲಿ ರಚಿಸಿದ ಈ ಕೃತಿ ಸುತ್ತಲ ವಾತಾವರಣ ಪ್ರೇರಿತವೂ ಆಗಿರಬಹುದೆ? ವೈಭವದ ಹಿಂದಿನ ಕ್ರೌರ್ಯವನ್ನು ಸೂಚಿಸುತ್ತದೆಯೆ?

ಇನ್ನೊಂದು ಚಿತ್ರದಲ್ಲಿ (ತಾಯಿ II) ಕೈಜೋಡಿಸಿ ನಿಂತ ಬಾಲೆಯ ಚಿತ್ರವಿದೆ. ಕೆಳಗೆ ಜೋಡಿಸಿದ ಕೈಗಳಿಂದ ಎದೆಯವರೆಗೆ ಒಂದು ಆ ಕೃತಿ. ಆಕೃತಿಯೊಳಗಿನ ಆಕೃತಿ. ಬಾಲೆಯದು ಪಾರ್ಶ್ವ ಮುಖ ನೋಟ. ರೇಣುಕಾ ಅವರ ಹಲವು ಚಿತ್ರಗಳಲ್ಲಿ ಈಜಿಪ್ಟ್ ಭಿತ್ತಿರಚನೆಗಳಲ್ಲಿ ಕಾಣುವಂತಹ ಪಾರ್ಶ್ವಮುಖನೋಟದ ವ್ಯಕ್ತಿಗಳ ಚಿತ್ರಣ ಕಂಡುಬರುತ್ತದೆ. ಭಾರತೀಯ ಸರಣಿ ಚಿತ್ರಗಳಲ್ಲೂ ಕೆಲವೆಡೆ ಈ ಶೈಲಿ ಉಂಟು. ಬಾಲೆಯ ನೀಲವರ್ಣದ ಹಿನ್ನೆಲೆಯಲ್ಲಿ ರೂಪಿಕೆಗಳಂತೆ ಕೆಲವು ಆಕಾರ, ವಸ್ತುಗಳ ಚಿತ್ರಣವಿದೆ. ಮಗುವಿನ (ಕೂರಿಸಿ) ತಳ್ಳುಗಾಡಿ, ಪ್ರಾಚೀನ ಶಿಲಾಯುಗ ಮಾನವ ರಚಿಸಿದಂತಹ ಹೆಣ್ಣಿನ ಚಿತ್ರ, ದೇವಾಲಯದ ಸ್ತಂಭದ ಮೇಲಿನ ದೇವತಾ ಮೂರ್ತಿಯಂತಹ (ಶಕ್ತಿ, ಮಾತೃದೇವತೆ) ಚತುರ್ಭುಜದ ಹೆಣ್ಣು ಇತ್ಯಾದಿ. ಕಲಾವಿದೆಯ ಕಾಲ ಪ್ರಜ್ಞೆ, ಇತಿಹಾಸ ಪ್ರಜ್ಞೆಯಿಂದ ಮೂಡುವ ಸಂಯೋಜನೆ ಹಲವು ಅರ್ಥಗಳಿಗೆ ಪ್ರೇರಣೆಯಾಗುತ್ತದೆ. ತಾಯಿ ಸರಣಿಯ ಮೂರು ನಾಲ್ಕನೆಯ ಚಿತ್ರಗಳೂ (ತಾಯಿ–III, ತಾಯಿ–IV) ಬಾಲೆಯರ ಮಂಗಳ ಕನಸಿನ ಲೋಕ ಕಟ್ಟುತ್ತಲೆ(ಮಂಗಳ ಸೂಚಕ ಭಿತ್ತಿರೇಖಾ ಚಿತ್ತಾರಗಳಿವೆ) ವಾಸ್ತವಾನುಭವಗಳಿಗೂ ಎಡೆಮಾಡಿ ಕೊಡುತ್ತವೆ. ಚಿತ್ರದಲ್ಲಿನ (ತಾಯಿ III) ಮಣ್ಣಿನ ಮಡಕೆಗಳು ಗೃಹಕೃತ್ಯದ ಸೂಚಕಗಳಾಗುತ್ತವೆ.

ಮತ್ತೊಂದು ಚಿತ್ರಸರಣಿಯ ಶೀರ್ಷಿಕೆ 'Nothing is immortal' ಯಾವುದೂ ಅಮರವಲ್ಲ ಎಂದು. ಒಂದು ಚಿತ್ರದ (ಚಿತ್ರ-೧) ಸಂಯೋಜನೆಯ ವಿವರಗಳು ಅರ್ಥವತ್ತಾಗಿವೆ. ಗಂಡು ಹೆಣ್ಣುಗಳ ಆಕೃತಿಯೊಡನೆ, ಪಿಂಡದಂತಹ ವರ್ಣವೃತ್ತದಲ್ಲಿನ ಚಿಗುರುವ ಎಲೆಗಳು, ಅತ್ತ ಇತ್ತ ಉದುರಿರುವ ಎಲೆಗಳು, ಬಲ ಕೆಳ ಪಾರ್ಶ್ವದಲ್ಲಿನ(ಸೇಬು) ಹಣ್ಣುಗಳು ಮರ್ತ್ಯತೆಯ ಅನುಭವವನ್ನು ಕಟ್ಟಿಕೊಡುತ್ತವೆ. ಇನ್ನೊಂದು ಚಿತ್ರ (ಚಿತ್ರ-೨) (ಸ್ವಿಡ್ಜರ್‌ಲೆಂಡ್ ಸಂಗ್ರಹಕ್ಕೆ ಸೇರಿ ಹೋಗಿರುವುದು)ದಲ್ಲಿ ಸ್ವರ್ಗದ ದೇವದೂತ(ತೆ) ಚಿತ್ರಣ ಒಂದು ವೈರುಧ್ಯ ಸೂಚನೆಯೇ ಆಗುತ್ತದೆ. ಸ್ವರ್ಗದ ನೆನಪು ಇಲ್ಲಿಯ(ಭೂಮಿ) ಮರಣದ ಸೂಚನೆಯೂ ಆಗುತ್ತದೆ. ಎಡ ಮೇಲ್ಭಾಗದ ಪಿರಮಿಡ್ಡುಗಳು ಮನುಷ್ಯನ ಭ್ರಮಾಮೂಲ ನಂಬಿಕೆಗಳ ಸಂಕೇತ. ಆ ಕಟ್ಟಣೆಗಳಿಗಾಗಿ, ಅವು ಶಾಶ್ವತ ಎಂದು, ಮರಣಾನಂತರ ಬದುಕಿಗೆಂದು, ಏನೆಲ್ಲ ಹಿಂಸೆ, ಶೋಷಣೆ, ಗುಲಾಮಗಿರಿ. ಶಿಲಾಸ್ತಂಭದ ಮೇಲಣ ಶಿಲ್ಪಗಳೂ ಶಾಶ್ವತ ಸ್ಮೃತಿ ಬಯಕೆಯ ಹಿನ್ನೆಲೆಯಲ್ಲಿಯೇ ಸಾವನ್ನೂ ನೆನಪಿಸುತ್ತವೆ. ಅಮರ, ಶಾಶ್ವತ ಎಂಬ ನಮ್ಮ ಭ್ರಮೆಯ ನಂಬಿಕೆಗಳಲ್ಲೆ ಸಾವಿನ ತತ್ತ್ವ ಅಡಗಿದೆ. ಯಾವುದೂ ಶಾಶ್ವತವಲ್ಲ, ಸಾವೊಂದೇ ಶಾಶ್ವತ. ❑

ಸತ್ಯದ ಬೆಳಕು



ಬೇಕೆಂದಾಗ
ಕಾಮನಬಿಲ್ಲು
ರಾರಾಜಿಸುವುದೆ ಆಕಾಶದಲ್ಲಿ?
ಬೇಕೆಂದಾಗ
ಅಂಬರ
ಮಳೆಯ ಹನಿಸುವನೆ?
ಅದಕ್ಕೆ, ಅದು ಇಲ್ಲವೆಂದರಾದೀತೆ?
ಸತ್ಯದ ಬೆಳಕೂ ಹಾಗೆ

ಯಾವ ಕ್ಷಣವೂ ಮಿಂಚಬಹುದು
ಮಿಂಚಿ ಮಾಯವಾಗಬಹುದು
ದೇವರೂ ಅಷ್ಟೇ
ನಮ್ಮ ಕಷ್ಟಕ್ಕೆ ಬರಲಿಲ್ಲವೆಂದು
ದೇವರೇ ಇಲ್ಲೆಂದರಾದೀತೆ?

ದೇವರು
ಸತ್ಯ
ಎಲ್ಲವೂ ಒಂದೇ
ಇದ್ದೂ ಇಲ್ಲದ ಹಾಗೆ
ಇಲ್ಲದಿದ್ದರೂ ಇದ್ದ ಹಾಗೆ.

● ಶೋಭಾ ಕುಲಕರ್ಣಿ

ಅಂಗವಿಕಲರಿಗೆ ಅವಕಾಶ ನೀಡಿ, ಅದ್ಭುತ ಸಾಧನೆ ನೋಡಿ

ಅಂಗವಿಕಲತೆ ದೌರ್ಬಲ್ಯದ ಸಂಕೇತವಲ್ಲ. ಬದಲಾಗಿ ಅದು ಅಂಗವಿಕಲ ಬಂಧುಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸಿ ಸಾಧನೆಗೆ ಹೆಚ್ಚಿನ ಛಲ ಮೂಡಿಸುವುದು. ಅವರ ಗಮನಾರ್ಹ ಸಾಧನೆಗೆ ಪ್ರೇರಣೆಯಾಗಲೆಂದೇ ಪ್ರತಿವರ್ಷ ಡಿಸೆಂಬರ್ 3ರಂದು ವಿಶ್ವಾದ್ಯಂತ ಅಂಗವಿಕಲರ ದಿನವನ್ನಾಗಿ ಆಚರಿಸಲಾಗುತ್ತಿದೆ.

ಅಂಗವಿಕಲರಿಗಾಗಿ ಅವಕಾಶಗಳು

ರಾಜ್ಯ ಸರ್ಕಾರ ಅಂಗವಿಕಲರ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳು :

- ಶ್ರವಣ ಮತ್ತು ದೃಷ್ಟಿದೋಷವುಳ್ಳವರಿಗಾಗಿ ವಿಶೇಷ ಶಾಲೆಗಳನ್ನು ನಡೆಸಲು ಉತ್ತೇಜನ.
- ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
- ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ
- ದೃಷ್ಟಿದೋಷವುಳ್ಳ ವಿದ್ಯಾರ್ಥಿಗಳಿಗೆ ಶ್ರವ್ಯ ಗ್ರಂಥಾಲಯದ ಅನುಕೂಲ
- "ಆಧಾರ" ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗಕ್ಕಾಗಿ ಅವಕಾಶ
- ಸ್ವಯಂ ಉದ್ಯೋಗ ಯೋಜನೆ ಅಡಿಯಲ್ಲಿ ಉಚಿತ ದೂರವಾಣಿ ಬೂತ್ ಸೌಲಭ್ಯ.
- ಸ್ವಯಂ ಉದ್ಯೋಗ ಅಥವಾ ಆದಾಯ ತರುವ ಉದ್ಯೋಗಗಳಿಗಾಗಿ ಸಾಲ ಸೌಕರ್ಯ.
- ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮೆ ಯೋಜನೆ
- ಮಾಸಿಕ ನಿರ್ವಹಣೆ ಭತ್ಯೆಯ ನೀಡಿಕೆ
- ಅಂಗವಿಕಲರಿಗೆ ಶೇ. 5ರಷ್ಟು ಸರ್ಕಾರಿ ಹುದ್ದೆಗಳಲ್ಲಿ ಮೀಸಲಾತಿ
- ಸಾಧನ ಸಲಕರಣೆಗಳ ಹಾಗೂ ತ್ರಿಚಕ್ರವಾಹನಗಳ ಉಚಿತ ಪೂರೈಕೆ
- ಅಂಗವಿಕಲರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್.

ಕರ್ನಾಟಕ ವಾರ್ತೆ

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered
Magazine

*Posted on 9th of every month
at Chamarajpet Post Office*

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು - 560 018